ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

Scan For Digital Colourful
Hampi Times E-paper
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com

ಸಂಪುಟ:01 • ಸಂಚಿಕೆ:250 • ನೋಂದಣಿ ನಂ.:KARKAN27911 • ವಿಜಯನಗರ • 29.02.2024 • ಗುರುವಾರ • ಪುಟ:04 • ಬೆಲೆ:2
lume:01 • Issue:250 • Reg.No:KARKAN27911 • VIJAYANAGARA • 29.02.2024 • Thursday • Page:04 • Rs:2

- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

29-02-2024 – ಗುರುವಾರ

ತಿಥಿ	: ಪಂಚಮಿ
ಪಕ್ಷ	: ಕೃಷ್ಣ
ನಕ್ಷತ್ರ	: ಚಿತ್ತ
ಯೋಗ	: ವೃದ್ಧಿ
ಕರಣ	: ಕೌಳವ
ಸೂರ್ಯೋದಯ	: 06.56.24
ಸೂರ್ಯಾಸ್ತ	: 18:28:36
ರಾಹು	: 14:07-15:34
ಯಮಘಂಡ	: 06:50-08:18
ಗುಳಿಕ	: 09:45-11:12

ತುಂಗಭದ್ರಾ ನೀರಿನ ಮಟ್ಟ



ಬುಧವಾರ: 28-02-2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1586.90 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	893 ಕ್ಯುಸೆಕ್
ಇಂದಿನ ಸಾಮರ್ಥ್ಯ	8.630 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1605.43 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	8047 ಕ್ಯುಸೆಕ್
ಸಾಮರ್ಥ್ಯ	29.406 ಟಿಎಂಸಿ

ಬೆಳಗಾವಿಯ ಕಾಮೇಶ್ ಪಾಟೀಲಗೆ ಕನಕಗಿರಿ ಕೇಸರಿ

ಹಂಪಿ ಟೈಮ್ಸ್ ಕೊಪ್ಪಳ

ಕನಕಗಿರಿ ಉತ್ಸವ-2024ರ ಅಂಗವಾಗಿ ಕನಕಗಿರಿಯ ಕಲ್ಮಠ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಆವರಣದಲ್ಲಿ ಬುಧವಾರ ನಡೆದ ರಾಜ್ಯ ಮಟ್ಟದ ಕುಸ್ತಿ ಪಂದಾವಳಿ ಅಂತಿಮ ಸ್ಪರ್ಧೆ ಕೊನೆಯ ಕ್ಷಣದವರೆಗೂ ರೋಚಕತೆಯನ್ನು ಕಾಯ್ದುಕೊಂಡಿತು.

74 ಕೆಜಿ ಮೇಲ್ಪಟ್ಟ ಪುರುಷ ವಿಭಾಗದ ಈ ಸ್ಪರ್ಧೆಯು ತುಂಬಾ ರೋಮಾಂಚನದಿಂದ ಕೂಡಿತ್ತು. ಬೃಹತ್ ಕುಸ್ತಿ ಅಖಾಡದಲ್ಲಿ ಮದಗಜಗಳಂತೆ ಸೆಣೆಸಾಡಿದ ಕುಸ್ತಿಪಟುಗಳು. ಅಂತಿಮವಾಗಿ ಬೆಳಗಾವಿಯ ಕಾಮೇಶ್ ಪಾಟೀಲ "ಕನಕಗಿರಿ ಕೇಸರಿ" ಪಟ್ಟವನ್ನು ತಮ್ಮದಾಗಿಸಿಕೊಂಡರು. ಹಳಿಯಾಳದ ಮಂಜುನಾಥ ಗೌಡಪ್ಪನವರ ಎರಡನೆ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು. ಕನಕಗಿರಿ ಕೇಸರಿ ಪ್ರಶಸ್ತಿ ಒಂದು ಬೆಳ್ಳಿಯ ಗಧೆ, 15,000 ನಗದು ಬಹುಮಾನ ಹಾಗೂ ಪದಕವನ್ನು ಒಳಗೊಂಡಿದೆ.

COLD-PRESSED OIL
TASTES GOOD
Food cooked in cold-pressed oil has an inherent flavor and taste.
Groundnut oil
Coconut Oil
Safflower Oil
Nandi Enterprises
C/o HAMPI TIMES, HOSAPETE
9482 599 089

81 ಕೋಟಿ ರೂ. ಗಾತ್ರದ ನಗರಸಭೆ ಬಜೆಟ್ ಮಂಡನೆ

ಬಜೆಟ್ ಮಂಡಿಸಿದ ಸ್ಥಾಯಿ ಸಮಿತಿ ಅಧ್ಯಕ್ಷ ಸಂತೋಷ । ಸದಸ್ಯರ ಸಹಕಾರದೊಂದಿಗೆ ನಗರದ ಸಮಗ್ರ ಅಭಿವೃದ್ಧಿ

■ ಹಂಪಿ ಟೈಮ್ಸ್ ಹೊಸಪೇಟೆ

ಸ್ಥಳೀಯ ನಗರಸಭೆಯ 2024-25ನೇ ಸಾಲಿನ ಆಯವ್ಯಯ ಗಾತ್ರ 81 ಕೋಟಿ ರೂ.ಗಳಾಗಿದ್ದು, ಈ ಬಜೆಟ್ ಪೌರಸಭೆಯು ಸೇವೆ ನೀಡುವಲ್ಲಿ ತೋರುವ ಕಾರ್ಯಕ್ಷಮತೆಯ ಮುನ್ನೋಟವಾಗಿದೆ ಎಂದು ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಂತೋಷ ತಿಳಿಸಿದರು.

ನಗರಸಭೆಯ ಸಭಾಂಗಣದಲ್ಲಿ ಬುಧವಾರ 2024-25ನೇ ಸಾಲಿನ ಬಜೆಟ್ ಮಂಡಿಸಿದ ಅವರು, ಆಯವ್ಯಯ ಗಾತ್ರ 81 ಕೋಟಿ ರೂಗಳಾಗಿದ್ದು, ಸರ್ಕಾದ ಅನುದಾನದ ಮೊತ್ತ 43 ಕೋಟಿ 64 ಲಕ್ಷ ರೂಗಳು., ನಗರಸಭೆ ನಿಧಿ 29 ಕೋಟಿ 4 ಲಕ್ಷ 24 ಸಾವಿರ ರೂ., ಹಾಗು ಸರ್ಕಾರಕ್ಕೆ ಇತರೆ ಇಲಾಖೆಗಳಿಗೆ ಪಾವತಿಸಬೇಕಾದ ಅಸಾಮನ್ಯ ಆದಾಯ 9 ಕೋಟಿ 7 ಲಕ್ಷ 85 ಸಾವಿರ ರೂ.ಗಳಾಗಿದ್ದು ಈಬಾರಿ 2 ಕೋಟಿ 35 ಲಕ್ಷ 57 ಸಾವಿರದ ಐದುನೂರು ಉಳಿತಾಯ ಮೊತ್ತದ ಆಯವ್ಯಯ ಮಂಡಿಸುತ್ತಿದ್ದೇನೆ ಎಂದರು.

ಈ ಬಾರಿಯ ಬೃಹತ್ ಗಾತ್ರದ ಬಜೆಟ್‌ನಲ್ಲಿ ಕೇಂದ್ರ ಸರ್ಕಾರದ 15ನೇ ಹಣಕಾಸು ಯೋಜನೆಯಡಿ ಬರುವ ಅನುದಾನ, ರಾಜ್ಯ ಹಣಕಾಸು ಆಯೋಗದ ಅನುದಾನ, ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ಅನುದಾನ, ರಾಜ್ಯ ಸರ್ಕಾರದ ಎಸ್‌ಎಫ್‌ಸಿ ಅನುದಾನ, ಆಸ್ತಿ ತೆರಿಗೆ, ಜಾಹೀರಾತು ತೆರಿಗೆ ಸೇರಿದಂತೆ ವಿವಿಧ ಆದಾಯಗಳ ಮೂಲಕ ನಗರಸಭೆ ವ್ಯಾಪ್ತಿಯ ಜನರಿಗೆ ಮೂಲಭೂತ ಸೌಲಭ್ಯಗಳು, ಸಮರ್ಪಕ ಸೇವೆಗಳನ್ನು ಒದಗಿಸಲಾಗುವುದು. ನಗರದ 35 ವಾರ್ಡ್‌ಗಳಿಗೆ 24/7 ಕುಡಿಯುವ ನೀರು ಪೂರೈಕೆಗೆ ಕ್ರಮವಹಿಸುವುದು, 6500 ವಸತಿ ರಹಿತ, ನಿವೇಶನರಹಿತರಿಗೆ 150 ಕೋಟಿ ರೂನಲ್ಲಿ ವಸತಿ ಸೌಲಭ್ಯಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಹಿಂದುಳಿದವರ, ಅಲ್ಪಸಂಖ್ಯಾತರ ಹಾಗೂ ವಿಕಲಚೇತನರ ಅಭಿವೃದ್ಧಿಗೆ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ, 3ಎಕರೆ ಪ್ರದೇಶದಲ್ಲಿ ಪೌರ ಕಾರ್ಮಿಕ ಗೃಹಗಳ ನಿರ್ಮಾಣ, ನೌಕರರಿಗೆ ವಿಶೇಷ ವೇತನ ಪಾವತಿ. ಕಾಗದ ರಹಿತ ಕಛೇರಿಯನ್ನಾಗಿಸಲು ಕ್ರಮ, ಫಾರಂ-3 ವಿತರಣೆಗೆ ಏಕ ಗವಾಕ್ಷಿ, ಕಸ ವಿಲೇವಾರಿಗೆ ಕಟ್ಟುನಿಟ್ಟಿನ ಕ್ರಮ, ಖಾಸಗಿ ಸಹಭಾಗಿತ್ವದೊಂದಿಗೆ ಉದ್ಯಾನವನಗಳ ನಿರ್ವಹಣೆ, ನಗರಸಭೆ ನೌಕರರು, ಅಧಿಕಾರಿಗಳಿಗೆ ನೌಕರರ ಕಾಲೋನಿ ನಿರ್ಮಾಣಕ್ಕೆ ಪ್ರಸ್ತಾವನೆ, ಸ್ವಚ್ಛ ಭಾರತ್ ಮಿಷನ್2.0 ಅಡಿ ವೈಯಕ್ತಿಕ ಹಾಗೂ ಸಾರ್ವಜನಿಕ, ಸಮುದಾಯ ಶೌಚಾಲಯಗಳ ನಿರ್ಮಾಣ, 2000 ನಾಯಿಗಳ ಸಂತಾನ ಹರಣ ಚಿಕಿತ್ಸೆಗೆ ಕ್ರಮ, ನಗರದ ಪ್ರಮುಖ 10 ಸ್ಥಳಗಳಲ್ಲಿ ಮಾದರಿ ಸುಲಭ ಶೌಚಾಲಯ ಸ್ಥಾಪನೆ, ಪೌರ ಕಾರ್ಮಿಕರಿಗೆ ವಿಶ್ರಾಂತಿ ಗೃಹ, ಸ್ವಯಂ ಉದ್ಯೋಗ ತರಬೇತಿ ಕೇಂದ್ರ ಸ್ಥಾಪನೆ ಹಾಗೂ ರಸ್ತೆಗಳನ್ನು ಸ್ವಚ್ಛವಾಗಿಡಲು ಗ್ರೀನ್ ಸ್ಕ್ವಾಡ್ ಮಾದರಿ ತನಿಖಾ ತಂಡ ರಚನೆ ಮಾಡಲಾಗುವುದು ಎಂದು ಹೇಳಿದರು. ನಗರಸಬೆ ಅಧ್ಯಕ್ಷೆ ಲತಾ ಅಧ್ಯಕ್ಷತೆವಹಿಸಿದ್ದರು. ಪೌರಾಯುಕ್ತ ಎರಗುಡಿ ಶಿವಕುಮಾರ, ನಗರಸಭೆ ಸದಸ್ಯರು ಉಪಸ್ಥಿತರಿದ್ದರು.

>> 4ನೇ ಪುಟ

2024-25ನೇ ಸಾಲಿನ ಆಯವ್ಯಯ ಒಟ್ಟು ಮೊತ್ತ

ನಗರಸಭೆ ನಿಧಿ ರೂಗಳಲ್ಲಿ :
29,04,24,000

ಅನುದಾನಗಳು :
43,64,00,000

ಅಸಾಮಾನ್ಯ ಆದಾಯ :
9,07,85,000

ಒಟ್ಟು ಆಯವ್ಯಯ ಮೊತ್ತ :
81,76,09,000

ಉಳಿತಾಯ ಮೊತ್ತ :
2,35,57,500

ನಗರಸಭೆ ಆದಾಯದ ಮೂಲಗಳು

1) ಸ್ವಂತ ತೆರಿಗೆ: ಅ) ತೆರಿಗೆ- ಆಸ್ತಿ ತೆರಿಗೆ - ಜಾಹೀರಾತು ತೆರಿಗೆ ಬ) ತೆರಿಗೇತರ-ಫೀಜುಗಳು-ನೀರು ಸರಬರಾಜು ಶುಲ್ಕ-ಬಳಕೆದಾರ ಶುಲ್ಕಗಳು-ವ್ಯಾಪರ ಪರವಾನಿಗೆ ಶುಲ್ಕಗಳು
2. ಕೇಂದ್ರ ಹಾಗು ರಾಜ್ಯ ಸರ್ಕಾರದ ಅನುದಾನಗಳು
3. ಹೊರಗಿನ ಆರ್ಥಿಕ ಸಹಾಯ-ಕೆ. ಯು.ಐ.ಡಿಎಫ್.ಸಿ.
4. ಇಂಗಾಲ ನೀಡಿಕೆ:ಘನತ್ಯಾಜ್ಯ ನಿರ್ವಹಣೆ/ಸ್ವಶಕ್ತಿ ಸಾಮರ್ಥ್ಯ
5. ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ ಯೋಜನೆಗಳು.

ಆಯವ್ಯಯ ಮುಖ್ಯಾಂಶಗಳು

■ ಕೇಂದ್ರ ಸರ್ಕಾರದ 15ನೇ ಹಣಕಾಸು ಯೋಜನೆಯಡಿ 12 ಕೋಟಿ 13 ಲಕ್ಷ ರೂ. ರಾಜ್ಯ ಸರ್ಕಾರದಿಂದ ಅನುದಾನ ಹಂಚಿಕೆಯಾಗಿದ್ದು, ನೀರು ಸರಬರಾಜು ಸಂಬಧಿತ ಕಾಮಗಾರಿಗಳಿಗಾಗಿ 3 ಕೋಟಿ 63 ಲಕ್ಷ ರೂ. ಹಾಗು ಘನತ್ಯಾಜ್ಯ ವಸ್ತು ನಿರ್ವಹಣೆ 3 ಕೋಟಿ 63 ಲಕ್ಷ ರೂ., ಕೊಳಗೇರಿ ಅಭಿವೃದ್ಧಿ, ರಸ್ತೆಗಳು, ಮಳೆ ನೀರು ಚರಂಡಿ ಕಾಮಗಾರಿಗಳು, ಸ್ಮಶಾನಗಳ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 4 ಕೋಟಿ 85 ಲಕ್ಷ ರೂ. ಸೇರಿದಂತೆ ಒಟ್ಟು ರೂ 12 ಕೋಟಿ 13 ಲಕ್ಷ ರೂಗೆ ಕ್ರಿಯಾ ಯೋಜನೆಯಡಿ ನಗರದ ಸಮಗ್ರ ಅಭಿವೃದ್ಧಿಗೆ ಕ್ರಮ ವಹಿಸಲಾಗುವುದು.

■ ರಾಜ್ಯ ಹಣಕಾಸು ಆಯೋಗದಿಂದ 4 ಕೋಟಿ 36 ಲಕ್ಷ ರೂ, ಪ.ಜಾ. ಅಭಿವೃದ್ಧಿಗಾಗಿ 91 ಲಕ್ಷ ರೂ., ಪ.ಪಂ.ಅಭಿವೃದ್ಧಿಗಾಗಿ 38 ಲಕ್ಷ ರೂ. ಅನುದಾನ ರಾಜ್ಯ ಸರ್ಕಾರದಿಂದ ಹಂಚಿಕೆ. ಶೇ24.10ರಲ್ಲಿ ಪ.ಜಾ./ಪ.ಪಂ ಅಡಿಯಲ್ಲಿ 1 ಕೋಟಿ 29 ಲಕ್ಷ ರೂ, ಶೇ.7.25ರಲ್ಲಿ ಹಿಂದುಳಿದ ವರ್ಗಗಳು ಹಾಗು ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ರೂ:22.25 ಲಕ್ಷಗಳು, ಶೇ5ರ ವಿಕಲಚೇತನರ ಅಭಿವೃದ್ಧಿಗಾಗಿ 15.35 ಲಕ್ಷ ರೂ. ಹಾಗು ನೇರಪಾವತಿ ಪೌರಕಾರ್ಮಿಕರ ವೇತನಕ್ಕಾಗಿ 2 ಕೋಟಿ 69 ಲಕ್ಷ ರೂ. 40 ಸಾವಿರ ರೂಗಳಿಗೆ ಕ್ರಿಯಾ ಯೋಜನೆ ತಯಾರಿಸಿ, ಎಸ್.ಎಫ್.ಸಿ ಸ್ವೀಕೃತಿ ಪರಿಶೀಲಿಸಿಕೊಂಡು ಕ್ರಮ ವಹಿಸಲಾಗುವುದು.

■ ನೌಕರರ ವೇತನ ಪಾವತಿಗಾಗಿ 11 ಕೋಟಿ 63 ಲಕ್ಷ ರೂ. ಹಾಗು ಬೀದಿ ದೀಪಗಳ ವಿದ್ಯುತ್ ಸುಡ್ತಿಗಾಗಿ 6 ಕೋಟಿ 26 ಲಕ್ಷ ರೂ., ನೀರು ಸರಬರಾಜು ಸ್ಥಾವರಗಳ ವಿದ್ಯುತ್ ಸುಡ್ತಿಗಾಗಿ 9 ಕೋಟಿ 6 ಲಕ್ಷ ರೂ. ರಾಜ್ಯ ಸರ್ಕಾರದಿಂದ ಎಸ್.ಎಫ್.ಸಿ.ಅಡಿಯಲ್ಲಿ ಅನುದಾನ ಹಂಚಿಕೆಯಾಗಿರುತ್ತದೆ.

■ ಕುಡಿಯುವ ನೀರಿನ ಕಾಮಗಾರಿಗಳಿಗೆ ಶಾಸಕರ ಟಾಸ್ಕ್ ಫೋರ್ಸ್ ಅಡಿಯಲ್ಲಿ ರಾಜ್ಯ ಸರ್ಕಾರದ ಎಸ್.ಎಫ್.ಸಿ ಅಡಿಯಲ್ಲಿ 10 ಲಕ್ಷ ರೂ. ಅನುದಾನ ಅಂದಾಜಿಸಲಾಗಿರುತ್ತದೆ.

■ ಆಸ್ತಿ ತೆರಿಗೆ ಆದಾಯ: 11 ಕೋಟಿ ರೂ., ಖಾತ ಬದಲಾವಣೆ 2 ಕೋಟಿ 60 ಲಕ್ಷ ರೂ. ಅಂದಾಜಿಸಲಾಗಿದೆ.

■ ಗ್ರಂಥಾಲಯ/ಸಮುದಾಯ ಭವನ/ಕಛೇರಿ ಕಟ್ಟಡ: ದುರಸ್ಥಿ ಅಥವಾ ನಿರ್ಮಾಣಕ್ಕಾಗಿ 60 ಲಕ್ಷ ರೂ. ಮುಖ್ಯ ರಸ್ತಗಳಲ್ಲಿ ಜಾಹೀರಾತು ಫಲಕಗಳು ನಿರ್ಮಾಣಕ್ಕಾಗಿ 20 ಲಕ್ಷ ರೂ., ರಸ್ತೆಗಳು ಅಥವಾ ರಸ್ತೆ ಪಕ್ಕದ ಚರಂಡಿಗಳ ದುರಸ್ಥಿಗೆ 70 ಲಕ್ಷ ರೂ. ಬೀದಿ ದೀಪಗಳು ಹೊರಗುತ್ತಿಗೆ ನಿರ್ವಹಣೆಗಾಗಿ 98 ಲಕ್ಷ ರೂ., ಮಳೆ ನೀರು ಚರಂಡಿ ದುರಸ್ತಿ ಅಥವಾ ನಿರ್ಮಾಣಕ್ಕಾಗಿ 35 ಲಕ್ಷ ರೂ., ಶೌಚಾಲಯಗಳು ಹೊರಗುತ್ತಿಗೆ ನಿರ್ವಹಣೆಗಾಗಿ 60 ಲಕ್ಷ ರೂ., ಘನತ್ಯಾಜ್ಯ ನಿರ್ವಹಣೆ ಅಂದಾಜು 7 ಕೋಟಿ 17 ಲಕ್ಷ ರೂ., ನೀರು ಸರಬರಾಜು ಮತ್ತು ಒಳಚರಂಡಿ ದುರಸ್ಥಿ ಅಥವಾ ನಿರ್ವಹಣೆಗಾಗಿ ಅಂದಾಜು 3 ಕೋಟಿ 77 ಲಕ್ಷ ರೂ. ವಾರ್ಷಿಕ ವೆಚ್ಚಕ್ಕಾಗಿ ಅಂದಾಜಿಸಲಾಗಿರುತ್ತದೆ.

■ ನಗರಸಭೆ ನಿಧಿಯಲ್ಲಿ 24.10ಪ.ಜಾ/ಪ.ಪಂ ಅಭಿವೃದ್ಧಿಗಾಗಿ 41 ಲಕ್ಷ ರೂ., ಶೇ.7.25 ಇತರೆ ಹಿಂದುಳಿದ ವರ್ಗಗಳು ಹಾಗು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ರೂ:12.50ಲಕ್ಷಗಳು ಮತ್ತು ಶೇ5: ವಿಕಲಚೇತನರ ಅಭಿವೃದ್ಧಿಗಾಗಿ 8.50 ಲಕ್ಷ ರೂ. ನಗರಸಭೆ ನಿಧಿಯಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ವೆಚ್ಚ ಅಂದಾಜಿಸಲಾಗಿರುತ್ತದೆ.

■ ನಗರಸಭೆ ನಿಧಿಯಲ್ಲಿ ನೌಕರರ 21 ದಿನಗಳ ವಿಶೇಷ ವೇತನ ಪಾವತಿ ಮತ್ತು ಪೌರ ಕಾರ್ಮಿಕರ ದಿನಾಚರಣೆ ಅಂಗವಾಗಿ ವಿಶೇಷ ಭತ್ಯೆ ಹಾಗು ಸುರಕ್ಷತಾ ಪರಿಕರಗಳು 80 ಲಕ್ಷ ರೂ. ವೆಚ್ಚ ಅಂದಾಜಿಸಲಾಗಿರುತ್ತದೆ.

■ ಸಂಚಾರಿ ವ್ಯವಸ್ಥೆ ಸುದಾರಣೆಗಾಗಿ ನಗರಸಭೆ ನಿಧಿಯಲ್ಲಿ 5 ಲಕ್ಷ ರೂ. ವೆಚ್ಚ ಅಂದಾಜಿಸಲಾಗಿರುತ್ತದೆ.

■ ಎಲ್ಲಾ 104 ಖಾಯಂ ಪೌ.ಕಾ.ಜಂಬುನಾಥ ಹಳ್ಳಿ 3 ಎಕರೆ ಪ್ರದೇಶದಲ್ಲಿ ಪೌರ ಕಾರ್ಮಿಕ ಗೃಹಗಳ ನಿರ್ಮಾಣಕ್ಕೆ ಕ್ರಮಕೈಗೊಳ್ಳಲಾಗುವುದು.

■ ನಗರಸಭೆ "ಕಾಗದ ರಹಿತ ಕಛೇರಿ" ಸಂಪೂರ್ಣ ಗಣಕೀಕರಣ ಕಾರ್ಯಕ್ಕೆ ಕ್ರಮ ವಹಿಸಲಾಗುವುದು.

■ ಕಂದಾಯ ಇಲಾಖೆ ಯೋಜನೆ ಅಡಿಯಲ್ಲಿ "ಏಕ ಗವಾಕ್ಷಿ' ಮಾದರಿಯಲ್ಲಿ ಫಾರಂ - 3 ವಿತರಣೆಗೆ ಕ್ರಮ ವಹಿಸಲಾಗುವುದು.

■ ನಗರದಲ್ಲಿ ಕಸ ವಿಲೇವಾರಿ ಕಟ್ಟುನಿಟ್ಟಿನ ಕ್ರಮಕ್ಕಾಗಿ ಕಸ ಎಲ್ಲೆಂದರಲ್ಲಿ ನಗರದಲ್ಲಿ ಚೆಲ್ಲದಂತೆ ತಡೆಗಟ್ಟಲು ಪ್ರಮುಖ 50 ಸ್ಥಳಗಳಲ್ಲಿ ಕ್ಯಾಮೆರ ಅಳವಡಿಸಲು ಕ್ರಮವಹಿಸಲಾಗುವುದು.

■ ನಗರದ ಪ್ರಮುಖ ಉದ್ಯಾನವನಗಳನ್ನು ಖಾಸಗಿ ನಿರ್ವಹಣೆಗೆ ವಹಿಸಲು ಕ್ರಮವಹಿಸಲಾಗುವುದು.

■ 2023-24 ಸ್ವಚ್ಛ ಭಾರತ್ ಮಿಷನ್ (ನಗರ) 2.0 ಅಡಿಯಲ್ಲಿ 179.62 ಲಕ್ಷ ರೂ. ವೈಯಕ್ತಿಕ ಶೌಚಾಲಯ, ಸಾರ್ವಜನಿಕ ಶೌಚಾಲಯ, ಸಮುದಾಯ ಶೌಚಾಲಯ, ಆಸ್ಪಿರೇಷನಲ್ ಶೌಚಾಲಯ ಹಾಗು ಮೂತ್ರಾಲಯ ನಿರ್ಮಾಣ ಮಾಡುವ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ಅನುಮೋದನೆಗೊಂಡಿರುತ್ತದೆ. ಕಾಮಗಾರಿ ಕೈಗೊಳ್ಳಲು ಕ್ರಮವಹಿಸಲಾಗುವುದು.

■ ಪ್ರಸಕ್ತ ವರ್ಷದಲ್ಲಿ 2000 ನಾಯಿಗಳ ಸಂತಾನ ಹರಣ ಚಿಕಿತ್ಸೆಗಾಗಿ ಕ್ರಮವಹಿಸಲಾಗುವುದು. ಬಿಡಾಡಿ ದನಗಗಳು/ಹಂದಿಗಳು/ಬೀದಿ ನಾಯಿಗಳ ನಿಯಂತ್ರಣಕ್ಕಾಗಿ 25 ಲಕ್ಷ ರೂಗಳನ್ನು ವೆಚ್ಚಕ್ಕಾಗಿ ಮೀಸಲಿರಿಸಿಲಾಗಿದೆ.

■ ನಗರ ಪ್ರಮುಖ 10 ಸ್ಥಳಗಳಲ್ಲಿ ಮಾದರಿ ಸುಲಭ ಶೌಚಾಲಯ ನಿರ್ಮಾಣಕ್ಕಾಗಿ ಕ್ರಮವಹಿಸಲಾಗುವುದು.

■ ಪಿಪಿಪಿ ಮಾದರಿಯಲ್ಲಿ ಸುಸಜ್ಜಿತ ಶೌಚಾಲಯ ಸ್ಥಾಪನೆಗೆ ಕ್ರಮವಹಿಸಲಾಗುವುದು.

■ ಪೌರ ಕಾರ್ಮಿಕರ ಆರೋಗ್ಯ-ವಿಶ್ರಾಂತಿಗಾಗಿ ನಗರಸಭೆ ಹತ್ತಿರ ವಿಶ್ರಾಂತಿ ಗೃಹ ನಿರ್ಮಾಣ.

■ ಸ್ತ್ರೀ ಶಕ್ತಿ ಸ್ವ ಉದ್ಯೋಗ ಸೃಷ್ಠಿಸಲು ಕೈಗಾರಿಕ ಪ್ರದೇಶದಲ್ಲಿ ಸ್ವಯಂ ಉದ್ಯೋಗ ತರಭೇತಿ ಕೇಂದ್ರ ಸ್ಥಾಪನೆಗೆ ಕ್ರಮವಹಿಸಲಾಗವುದು

■ ನಗರ ಪ್ರಮುಖ ರಸ್ತೆಗಳಲ್ಲಿ ಸ್ವಚ್ಛವಾಗಿಡಲು "ಗ್ರೀನ್ ಸ್ಕ್ವಾಡ್" ಮಾದರಿ ತನಿಖಾ ತಂಡ ರಚನೆ ಮಾಡಲಾಗುವುದು.

ವಚನ ಅರಿವು

ದೇವರೆಲ್ಲಿರುವನು?

ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ,
ಆ ಕಲ್ಲು ಕಲ್ಲ ಮೇಲೆ ಕಡೆದರೆ
ದೇವರೆತ್ತ ಹೋದರೊ?
ಲಿಂಗಪ್ರತಿಷ್ಠೆಯ ಮಾಡಿದವಂಗೆ
ನಾಯಕನರಕ ಗುಹೇಶ್ವರಾ.

– ಅಲ್ಲಮಪ್ರಭುದೇವರು

ಕಲ್ಲಿನಿಂದಲೇ ಮನೆ, ಗುಡಿಗಳನ್ನು ಕಟ್ಟುತ್ತೇವೆ. ಕಲ್ಲಿನಿಂದಲೇ ದೇವರ ವಿಗ್ರಹವನ್ನು ಮಾಡಿ ಪೂಜಿಸುತ್ತೇವೆ. ಆ ಕಲ್ಲನ್ನು ಇನ್ನೊಂದು ಕಲ್ಲಿನಿಂದ ಕಟೆದರೆ ನಾವು ಕಲ್ಲನೆ ಮಾಡಿಕೊಂಡ ರೂಪವನ್ನು ತಾಳುತ್ತವೆ. ವಿಗ್ರಹ ಮಾಡಿದರೆ ವಿಗ್ರಹ, ಲಿಂಗ ಮಾಡಿದರೆ ಲಿಂಗ. ಆಯತಾಕಾರ ಮಾಡಿದರೆ ಚೌಕದ ರೂಪ. ಹೀಗೆ ಕಲ್ಲಿನಿಂದ ನಮಗೆ ಬೇಕಾದ ರೂಪಕ್ಕೆ ಕಟೆದು ತಂದು ನಿಲ್ಲಿಸುತ್ತೇವೆ. ನೀವು ಪೂಜಿಸುವ ದೇವರ ವಿಗ್ರಹದಲ್ಲಿ, ಆ ಕಲ್ಲಿನಲ್ಲಿ ದೇವರಿದ್ದರೆ ಕಟೆದಾಗ ಅಲ್ಲಿದ್ದ ದೇವರ ಗತಿಯೇನಾಯ್ತು? ನೀವು ಕಟೆದರೆ ದೇವರನ್ನು ಕಟೆದಂತಾಗುವುದಿಲ್ಲವೆ? ದೇವರು ನಿಮ್ಮಿಂದ ಕಟೆಸಿಕೊಂಡು ಸುಮ್ಮನಿರುತ್ತಾನೆಯೆ? ಇಂತಹ ಕಲ್ಲನ್ನು ತಂದು ಲಿಂಗವೆಂದು ಪ್ರತಿಷ್ಠಾಪಿಸಿದರೆ ಅಥವ ಲಿಂಗವನ್ನು ತನ್ನ ಅರಿವಿನ, ತನ್ನ ಚೈತನ್ಯದ ಕುರುವು ಎಂದು ಕಾಣದೆ ಅದನ್ನೆ ಆಡಂಬರಕ್ಕಾಗಿ ಬಳಸಿದರೆ ಅವರಿಗೆ ಅರಿವು ಕಾಣುವುದಿಲ್ಲ. ಅವರ ಬದುಕು ನರಕವಾಗಿರುತ್ತದೆ ಎಂದು ಅರಿವೇ ಮುಖ್ಯವೆನ್ನುತ್ತಾನೆ ಅಲ್ಲಮಪ್ರಭು.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

ವಿಜ್ಞಾನದ ಬಳಕೆ ಆರೋಗ್ಯ ಕರವಾಗಿರಲಿ ಹೊರತು ಅತಿ ರೇಖವಾಗದಿರಲಿ

ಹಂಪಿ ಟೈಮ್ಸ್ ಹರಪನಹಳ್ಳಿ

ವಿಜ್ಞಾನದ ಬಳಕೆ ಆರೋಗ್ಯ ಕರವಾಗಿರಲಿ ಹೊರತು ಅತಿರೇಖವಾಗದಿರಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಭಾರತದ ಶ್ರೀಮಂತ ಪರಂಪರೆಯನ್ನು ನೆನಪಿಸುವ ದಿನ ಇದಾಗಿದ್ದು ಸರ್ ಸಿವಿ ರಾಮನ್ ರವರು ಏಷ್ಯಾ ಖಂಡದಲ್ಲಿ ವಿಜ್ಞಾನದ ವಿಷಯದಲ್ಲಿ ನೋಬೆಲ್ ಪಾರಿತೋಷಕ ಪಡೆದ ಮೊದಲ ವಿಜ್ಞಾನಿಯಾಗಿದ್ದಾರೆ, ಜಗತ್ತಿನಲ್ಲಿ ನಮ್ಮದೇ ಶವು ವೈಜ್ಞಾನಿಕ ಕ್ಷೇತ್ರದಲ್ಲಿ ಸಾಕಷ್ಟು ಎತ್ತರಕ್ಕೆ ಬೆಳೆದಿದ್ದು ಬಾಹ್ಯಕಾಶ ಸಂಶೋಧನೆಯಲ್ಲಿ ಚಂದ್ರನಯಾನಕ್ಕೆ ಲಗ್ಗೆ ಇಡುವ ಮೂಲಕ ಜಗತ್ತಿನ ಪ್ರಮುಖ ರಾಷ್ಟ್ರಗಳ ಪಟ್ಟಿಗೆ ನಾವು ಸೇರ್ಪಡೆಯಾಗುವ ಮೂಲಕ ವೈಜ್ಞಾನಿಕ ಸಂಶೋಧನೆಯಲ್ಲಿ ನಾವು ಎತ್ತರದ ಬೆಳವಣಿಗೆ ಕಂಡಿದ್ದೇವೆ ಎಂದು ಮುಖ್ಯ ಶಿಕ್ಷಕ ರುದ್ರೇಶ್ ಬಡಿಗೇರ್ ತಿಳಿಸಿದರು.

ತಾಲೂಕಿನ ತೌಡೂರೂ ಗ್ರಾಮ ಎಎಂಕಾಡಮ್ಮ ವೀರಯ್ಯ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ರಾಷ್ಟ್ರೀಯ ವಿಜ್ಞಾನದಿನಾಚರಣೆ ಉದ್ಘಾಟಿಸಿ ಮಾತನಾಡಿದರು ನಾವು ದಿನನಿತ್ಯ ವಿಜ್ಞಾನದ ಉಪಕರಣಗಳಾದ ಟಿ ವಿ, ಮೊಬೈಲ್ ಬಳಕೆಯಿಂದ ನಮ್ಮ ಪೂರ್ವಜರ ನೀಡಿರುವ ಸಂಸ್ಕಾರಗಳನ್ನುಮರೆಯುತ್ತಿದ್ದೇವೆ, ವೈಜ್ಞಾನಿಕ ಉಪಕರಣಗಳು ನಮ್ಮ ಒಳಿತಿಗಾಗಿ ಮಾತ್ರ ಬಳಸಿಕೊಳ್ಳ ಬೇಕು ಹೊರತು ನಾವು ಅದಕ್ಕೆ ದಾಸರಾಗಿರ ಬಾರದು ಎಂದರು.

ವಿಜ್ಞಾನ ಶಿಕ್ಷಕಿಯಾದ ರೇಷ್ಮಾ ಎಂ ಮಾತನಾಡಿ, ನಾವು ಇಂದು ಜಗತ್ತಿನಲ್ಲಿ ಎತ್ತರದ ಬೆಳವಣಿಗೆ ಕಾಣಲು ವೈಜ್ಞಾನಿಕ ಕ್ಷೇತ್ರದಲ್ಲಿ ನಮ್ಮ ಅನೇಕ ವಿಜ್ಞಾನಿಗಳ ಕೊ ಡುಗೆ ಅಪಾರವಾಗಿದೆ ಇಂದು ಊಹೆಗೂ ನಿಲುಕದ ಮಟ್ಟದಲ್ಲಿ ಸಂಶೋದನೆಗಳು ನಡೆಯುತ್ತಿದ್ದು ಮುಂದು ವರೆದ ಕೆಲ ರಾಷ್ಟ್ರಗಳು ನಮ್ಮನ್ನು ಕಂಡು ಅಪಹಾಸ್ಯ ಮಾಡತ್ತಿದ್ದವು ಇಂದು ನಾವು ಚಂದ್ರನವರೆಗೆ ಪ್ರಯಾ ಣಿಸಿ ಕ್ಷಿಪ್ರಗತಿಯ ಆವಿಷ್ಕಾರದಿಂ ದ ಬೆಳೆದಿರುವುದನ್ನು ಕಂಡು ನಮ್ಮನ್ನು ನೋಡುವ ದೃಷ್ಟಿಕೋನಗಳು ಬದಲಾ ಗಿವೆ ಮಕ್ಕಳು ಪ್ರತಿನಿತ್ಯ ಓದಿನ ಕಡೆಗೆ ಗಮನ ಹರಿಸಬೇಕು ಒಳ್ಳೆಯ ವಿಚಾರಗಳನ್ನಅಳವಡಿಸಿಕೊಂಡು ದೇಶಕ್ಕೆ ನೀವು ಮಾದರಿ ಕೊಡುಗೆಯನ್ನು ನೀಡುವ ಆಲೋಚನೆಗಳನ್ನು ಮೈಗೂಡಿಸಿ ಕೊಳ್ಳಬೇಕು ಎಂದರು

ಈ ಸಂದರ್ಭದಲ್ಲಿ ಸದಾನಂದ ನಾಯಕ್, ದೇವರಾಜ್, ಜಗದೀಶ್ ಜಿ ಎಂ ಶಿಕ್ಷಕರು ಮತ್ತಿತರರು ಉಪಸ್ಥಿತರಿದ್ದರು

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 9448633038

ಹಾದಿಯ ಚೆಲುವು

ನಾನು ಪ್ರವಾಸಕ್ಕೊ ಚಾರಣಕ್ಕೊ ಯಾತ್ರೆಗೊ ಹೋದಾಗ, ನೋಡಬಯಸಿದ ತಾಣಗಳಿಗಿಂತ ಹೆಚ್ಚಾಗಿ ಹಾದಿ ಅನುಭವಗಳಿಗೆ ತೆರೆದುಕೊಳ್ಳುವುದಕ್ಕೆ ಯತ್ನಿಸುತ್ತೇನೆ. ಅಂದರೆ ಸಹಪಯಣಿಗರನ್ನು ಗಮನಿಸುವುದು, ಅವರೊಡನೆ ಮಾತುಕತೆಯಾಡುವುದು, ಅವರ ಅನುಭವ-ದೃಷ್ಟಿಕೋನ ತಿಳಿದುಕೊಳ್ಳಲು ಯತ್ನಿಸುವುದು; ಈ ದಿಸೆಯಲ್ಲಿ ಏರ್ಪಡುವ ಮಾನವ ಸಂಬಂಧಗಳ ಕಟು ಮಧುರ ಭಾವಗಳಿಗೆ ಮೈಯೊಡ್ಡುವುದು. ಇದರಿಂದ ಗಮ್ಯ ನಿರಾಶೆ ಹುಟ್ಟಿಸಿದರೂ ಪಯಣ ಸಮೃದ್ಧವಾಗಿರುತ್ತದೆ.

ನಾನು ಕಂಡಂತೆ, ಧಾರ್ಮಿಕ ಯಾತ್ರೆಗಳಿಗೆ ಕೂಲಿಕಾರರು ರೈತರು ಬಡವರು ಹೆಚ್ಚು ಬರುತ್ತಾರೆ. ಆದರೆ ಪ್ರವಾಸ-ಚಾರಣಗಳಿಗೆ ಮಧ್ಯಮವರ್ಗದ ನಗರದವರು. ವೃತ್ತಿಬದುಕಿನ ಯಾಂತ್ರಿಕತೆ, ಬಾಳನೊಗಕ್ಕೆ ಕೊರಳೊಡ್ಡಿದ ಗೃಹಿಣಿಯರ ದಣಿವು, ತರುಣರ ಸಾಹಸೋತ್ಸಾಹ, ಮುಪ್ಪನ್ನೆದುರಿಸುವ ವಯಸ್ಕರ ಛಲ, ಕಲಾವಿದರ ಅನುಭವದ ಹಸಿವು, ವೈವಾಹಿಕ ಬದುಕಿನ ಬಿಕ್ಕಟ್ಟು, ಆಗಷ್ಟೆ ಮೊಳೆತ ನವಪ್ರೇಮ, ನಿಸರ್ಗದೂರರಾಗಿ ಅನುಭವಿಸಿದ ರಿಕ್ತತೆ, ಹೊಸ ಸಂಬಂಧ ಬೆಳೆಸುವ ತವಕ-ಎಷ್ಟೊಂದು ಪ್ರೇರಣೆಗಳು ಜನರನ್ನು ಮನೆಊರುಗಳಿಂದ ಬಿಡಿಸಿ ನದಿ ಕಾಡು ಬೆಟ್ಟಗಳಿಗೆ ಕರೆತಂದಿರುತ್ತವೆ. ಆದರೆ ಜನ ಯಾವ ಉದ್ದೇಶಕ್ಕೆಂದು ಬರುತ್ತಾರೆಯೊ ಅದು ಈಡೇರುತ್ತದೆಯೇ, ಗುಮಾನಿ. ತಿರುಗಾಟವು ಕೆಲವರಿಗಾದರೂ ಅನಿರೀಕ್ಷಿತ ಅನುಭವ ತಿಳುವಳಿಕೆ ಕೊಟ್ಟು ಅವರ ಆಲೋಚನ ವಿಧಾನವನ್ನೂ ಜೀವನಕ್ರಮವನ್ನೂ ಬದಲಿಸುತ್ತದೆ.

ಹಿಮಾಲಯದ ಚಾರಣಕ್ಕೆ ಐಟಿ ಕಂಪನಿಯ ತರುಣ-ತರುಣಿಯರು, ಕಾರ್ಪೊರೇಟ್ ಆಸ್ಪತ್ರೆಯ ವೈದ್ಯರು ವಿಶೇಷವಾಗಿ ಬರುವುದುಂಟು. ಅವರ ಚೈತನ್ಯವನ್ನು ಅವರ ಸಂಸ್ಥೆಗಳು ಹಿಂಡಿ ಹಾಕಿರುತ್ತವೆ. ಮರು ಹಿಂಡುವಿಕೆಗೆ ಬೇಕಾಗಿ ಶಕ್ತಿ ತುಂಬಿಕೊಂಡು ಬರಲೆಂದೂ ಚಾರಣಕ್ಕೆ ಕಳಿಸಿರುತ್ತವೆ. ಚಿಕ್ಕವಯಸ್ಸಿಗೆ ಪ್ರತಿಷ್ಠಿತ ಕೆಲಸಕ್ಕೆ ಸೇರಿ ಲಕ್ಷಾಂತರ ಗಳಿಸಿ ಗುಡ್ಡೆ ಹಾಕಿಕೊಂಡವರು, ಭೌತಿಕ ಸಂಪತ್ತು ಲೌಕಿಕ ಯಶಸ್ಸುಗಳಿಂದ ನಿರಾಶೆ ಹೊಂದಿ, ತಮ್ಮ ಪ್ರಿಯವಾದ ಹವ್ಯಾಸಕ್ಕೆ ಹೊರಳುವುದುಂಟು. ಆದರೆ ಉದ್ಯೋಗದಲ್ಲಿದ್ದೇ ಬೆಂದ ತನುಮನವನ್ನು ಮರಳಿ ಸಜ್ಜುಗೊಳಿಸಿಕೊಳ್ಳುವ ಸೆರೆಯಾಳುಗಳದ್ದೇ ಸಮಸ್ಯೆ.

ನಾನೊಮ್ಮೆ ವೈದ್ಯರ ತಂಡದೊಂದಿಗೆ ಚಾರಣ ಹೋಗಿದ್ದೆ. ಹೆಚ್ಚಿನವರು ವೈದ್ಯಕೀಯ ಸೇವೆಯನ್ನು ವ್ಯಾಪಾರ ಮಾಡಿಕೊಂಡಿರುವ ಕಾರ್ಪೊರೇಟ್ ಆಸ್ಪತ್ರೆಗಳ ಉದ್ಯೋಗಿಗಳು. ಇಷ್ಟದಿಂದಲೊ ಸ್ವಯಿಚ್ಛೆಗೆ ವಿರುದ್ಧವಾಗಿಯೊ ದುಡಿಯುತ್ತ ಸ್ವತಃ ರೋಗಿಗಳಾದವರು. ಇವರು ತಮ್ಮ ಪ್ರತಿಷ್ಠಿತ ಸುಖಕರ ಬದುಕನ್ನು ಬಿಟ್ಟು ಕಷ್ಟಕ್ಕೆ ಒಡ್ಡಿಕೊಳ್ಳಲೆಂದೇ ಬಂದಿದ್ದರು. ಬಂದಲ್ಲಿ ಸ್ವಯಂಸೇವಕರಾಗಿ ದುಡಿಯುತ್ತಿದ್ದರು. ಹೊಸ ಅನುಭವಕ್ಕಾಗಿ ಕಾತರಿಸುತ್ತಿದ್ದರು. ಪ್ರಕೃತಿಯ ಜತೆ ಮಕ್ಕಳಂತೆ ಬಿಚ್ಚಿಕೊಳ್ಳುತ್ತಿದ್ದರು. ಕಳೆದುಕೊಂಡಿದ್ದನ್ನು ಪಡೆದಂತೆ, ಜ್ಞಾನೋದಯವಾಗಿ ಹೊಸಹಾದಿ ಸಿಕ್ಕಂತೆ ನಲಿಯುತ್ತಿದ್ದರು. ವೃತ್ತಿಜೀವನದ ತಪ್ಪುಒಪ್ಪುಗಳನ್ನು ಹಂಚಿಕೊಂಡು ಹಗುರಾಗುತ್ತಿದ್ದರು. ಚಾರಣ ಹೊಸ ಮನುಷ್ಯರಾಗಲು ಯತ್ನಿಸುತ್ತಿದ್ದರು.

ಮುರಿದುಹೋದ ಬಾಳಿನಿಂದ ಖಿನ್ನರಾದವರು ಚಾರಣದಲ್ಲೂ ಒಂಟಿಯಾಗಿ ಮೌನವಾಗಿ ಇರುವರು. ಒಬ್ಬರಿಗೆ ಮಡದಿ ತ್ಯಜಿಸಿದ್ದರು. ಕಛೇರಿಯಲ್ಲಿ ಸಹೋದ್ಯೋಗಿಗಳ ಕಿರಿಕಿರಿಯಿತ್ತು. ಮನೆಯಲ್ಲಿದ್ದರೆ ಬರುತ್ತಿದ್ದ ಆತ್ಮಹತ್ಯೆಯ ಆಲೋಚನೆಯಿಂದ ತಪ್ಪಿಸಿಕೊಳ್ಳಲು ಕಾಡಿಗೆ ಬಂದಿದ್ದರು. ಚಾರಣದಲ್ಲಿ ತಮಗೆ ವಿಶ್ವಾಸ ತೋರುವವರಿಗೆ ಗೋಂದಿನಂತೆ ಅಂಟಿಕೊಳ್ಳುತ್ತಿದ್ದರು. ನಾನವರಿಗೆ ಕೇಳಿದೆ: 'ಸಾಮಾನ್ಯವಾಗಿ ಮಹಿಳೆಯರು ಹಲ್ಲುಕಚ್ಚಿ ಕಷ್ಟ ಸಹಿಸುತ್ತಾರೆ. ಮಡದಿ ಬಿಟ್ಟು ಹೋಗಲು ನಿಮ್ಮಲ್ಲೂ ದೋಷವಿತ್ತು ಎಂದು ಎಂದಾದರೂ ಅನಿಸಿದ್ದೆಯಾ?'. ಆತ ರಪ್ಪನೆ ಹೆಡೆತಿರುವಿದ ಸರ್ಪದಂತೆ 'ನೆವರ್' ಎಂದರು. ಅವರು ತಮ್ಮನ್ನು ಈ ಲೋಕದ ಪ್ರಾಮಾಣಿಕ ಮತ್ತು ಅತ್ಯಂತ ಚೆಲುವಾದ ವ್ಯಕ್ತಿ ಎಂದು ನಂಬಿದ್ದರು. ತಾನು ಮಾಡಿದ್ದೆಲ್ಲವೂ ಸರಿಯೆಂಬ ಸ್ವಸಮರ್ಥನೆ ಮಾಡಿಕೊಳ್ಳುತ್ತಿದ್ದರು. ಆಳವಾದ ಕೀಳರಿಮೆಯಿಂದಲೂ ಈ ಅಹಮಿಕೆ ಬೆಳೆದಿರಬಹುದು.

ಇಂತಹ ಸ್ವಪ್ರೇಮಿಗಳ ಜತೆ ಬಹಳ ಹೊತ್ತು ಏಗಲು ನನಗಾಗದು. ಖಿನ್ನತೆಯಿಂದ ಬಳಲುವವರ ಜತೆ ಒಡನಾಡುವ ಮಾಡುವ ತರಬೇತಿಯೂ ನಮ್ಮಲ್ಲಿಲ್ಲ.

ಜೆರುಸಲೆಂ ಯಾತ್ರೆಯಲ್ಲಿ ಬಂದಿದ್ದ ತರುಣನೊಬ್ಬನ ನೆನಪಾಗುತ್ತಿದೆ. ಪಾದ್ರಿಯ ಮಗನಂತೆ. ತಂದೆಯ ಸತತ ನೈತಿಕ ಉಪದೇಶವೇ ಹುಡುಗನ ಸಹಜ ಸ್ವಾತಂತ್ರ್ಯ ಕಿತ್ತುಕೊಂಡು ಹತಾಶಗೊಳಿಸಿರಬೇಕು. ಹಿರಿಯರು ತಮ್ಮ ಹಿರಿತನದ ಬಲದಿಂದ ಚಿಕ್ಕವರ ದೋಷಗಳನ್ನೆ ಹುಡುಕಿ ಸರಿಪಡಿಸುವ ಶಿಕ್ಷಕರ ಪಾತ್ರವಹಿಸುವ ಕಡೆ, ಖಿನ್ನಮಕ್ಕಳು ರೂಪುಗೊಳ್ಳುವುದುಂಟು. ಮಗನನ್ನು ಧಾರ್ಮಿಕ ಯಾತ್ರೆ ಗುಣಪಡಿಸಬಹುದು ಎಂದು ತಂದೆಯ ಆಶಯವಿತ್ತು. ಆದರೆ ಯಾತ್ರೆ ಈ ದಿಸೆಯಲ್ಲಿ ಸೋತಿತ್ತು. ಆತ ಊಟಕ್ಕೆ ತಿಂಡಿಗೆ ಸಕಾಲಕ್ಕೆ ಡೈನಿಂಗ್ ಹಾಲಿಗೆ ಬರುತ್ತಿರಲಿಲ್ಲ. ಬಚ್ಚಲಮನೆ ಸೇರಿಕೊಂಡರೆ ಬೇಗ ಹೊರಗೆ ಬರುತ್ತಿರಲಿಲ್ಲ. ಬಸ್ಸಿನಲ್ಲಿದ್ದವರು ಅವನಿಗಾಗಿ ಕಾಯಬೇಕಿತ್ತು. ಅವನ ಜತೆ ಬಂದಿದ್ದ ಪಕ್ಕದ ಮನೆಯ ಮಹಿಳೆಯರು ಅವನನ್ನು ಉಪಚರಿಸುವ ದಾದಿಗಳಾಗಿಮಾರ್ಪಟ್ಟಿದ್ದರು.ಅವನಿಗಾಗಿತಿಂಡಿತೆಗೆದಿರಿಸಿಕೊಳ್ಳುತ್ತಿದ್ದರು. ಏಸುವು ಶಿಲುಬೆ ಹೊರುತ್ತ ದಣಿಸು ಕುಸಿದಾಗ ಅವನ ಬೆವರು ಧೂಳು ಒರೆಸಲು ತನ್ನ ಕರವಸ್ತ್ರ ಕೊಟ್ಟ ಹೆಮ್ಮಗಳಂತೆ ಕರುಣೆ ಹರಿಸುತ್ತಿದ್ದರು.



ಯಾತ್ರೆಯು ಊರಲ್ಲಿ ಕಾಣದೆ ಹೋದ ಮನುಷ್ಯರ ಒಳಗಿನ ಪ್ರೇಮವನ್ನು ಹೊಮ್ಮಿಸುತ್ತಿತ್ತು.

ಪ್ರವಾಸ ಯಾತ್ರೆ ಚಾರಣಗಳು ಊರುಮನೆಯಲ್ಲಿ ಪಾಲಿಸುವ ಜಾತಿಧರ್ಮದ ನಿಯಮಗಳನ್ನು ತುಸುವಾದರೂ ಭಗ್ನಗೊಳಿಸುತ್ತವೆ. ಚಾರಣವಂತೂ ತುಂಬಿಕೊಂಡ ಗರ್ವ ಪ್ರತಿಷ್ಠೆಗಳನ್ನು ವಿಸರ್ಜಿಸುವ ಜಾಗ. ಇಲ್ಲಿ ನಾವು ನಮ್ಮ ಭಾಷೆಯನ್ನು ಬೇರೊಬ್ಬರ ಮೇಲೆ ಹೇರುವುವುದಿಲ್ಲ. ಬದಲಿಗೆ ನಮಗೆ ಬಾರದ ಭಾಷೆ ಆಲಿಸುತ್ತೇವೆ. ಅದನ್ನು ವಿದ್ಯಾರ್ಥಿಗಳಂತೆ ಕಲಿಯಲು ಯತ್ನಿಸುತ್ತೇವೆ. ಮತ್ತೊಬ್ಬರ ನೋವಿಗೆ ಖುಶಿಗೆ ಸಾಕ್ಷಿಯಾಗುತ್ತವೆ. ನಮ್ಮ ಮಿತಿಗಳನ್ನು ಕಂಡುಕೊಳ್ಳುತ್ತೇವೆ. ಚಾರಣದಿಂದ ಮೈಯಿಂದ ನೆಣ ಮಾತ್ರವಲ್ಲ, ಸಾಮಾಜಿಕ ಪೂರ್ವಗ್ರಹಗಳ ಚರ್ಬಿಯೂ ಕರಗಿರುತ್ತದೆ. ಇಷ್ಟಾಗಿಯೂ ತಮ್ಮ ಜಾತಿಶ್ರೇಷ್ಠತೆ ಕಾದುಕೊಳ್ಳುವವರು ಇಲ್ಲದಿಲ್ಲ. ಅರಾವಳಿ ಚಾರಣದಲ್ಲಿ ಒಬ್ಬ ಮೇಲ್ಜಾತಿ ತರುಣನು, ತಾನು ಹೇಗೆ ಬೇರೆಬೇರೆ ಮಾಂಸದ ಅಡುಗೆ ತಯಾರಿಸುವ ಬಗ್ಗೆ ಹೇಳಿಕೊಳ್ಳುತ್ತಿದ್ದನು. ಇದರಿಂದ ಕೆಲವರು ಜಾತಿಗೆಟ್ಟವನೆಂದು ತಿರಸ್ಕಾರ ತೋರುತ್ತಿದ್ದರೆ, ಅವನ ಮುಕ್ತಮನಸ್ಸಿಗೆ ಹೆಚ್ಚಿನವರು ಪ್ರೀತಿಸುತ್ತಿದ್ದರು.

ಚಾರಣವು ದೀರ್ಘಕಾಲದಿಂದ ನಾವು ಪರಿಚಿತರ ಅಪರಿಚಿತ ಮುಖಗಳನ್ನು ಕಾಣಿಸಬಹುದು. ಭಾಷೆ ಜಾತಿ ಧರ್ಮಗಳ ಗೆರೆಯನ್ನು ದಾಟಿ ನಾವು ಮನುಷ್ಯರ ಸುಖದುಃಖಕ್ಕೆ ಮಿಡಿಯಲು ಪ್ರೇರಿಸಬಹುದು. ಮೊದಲ ದಿನ ತಂಡದ ಎಲ್ಲರ ಮುಖಗಳು ಅಪರಿಚಿತ ದ್ವೀಪಗಳು. ಎರಡನೆಯ ದಿನ ಮುಖದಲ್ಲಿ ಸಣ್ಣಗೆ ಮುಗುಳು ಅರಳುತ್ತದೆ. ಒಳಗಿದ್ದ ತಿಂಡಿಗಳು ಮೆಲ್ಲನೆ ಹೊರಬಂದು ಹಂಚಿಕೆ ಆಗುತ್ತವೆ. ಮುಗುಳ್ನಗೆ ಕಣ್ಣನೋಟ ಮಾತುಕತೆ, ದುಃಖಹಂಚಿಕೆ ಶುರುವಾಗುತ್ತದೆ. ದ್ವೀಪಗಳ ನಡುವೆ ಸೇತುವೆ ನಿರ್ಮಾಣಗೊಳ್ಳುತ್ತವೆ. ಚೆನ್ನೈನಿಂದ ಬಂದಿದ್ದ ಅರವಿಂದನು, ದುರ್ಬಲರ ಲಗೇಜನ್ನು ತಾವೇ ಹೊರುತ್ತಿದ್ದನು. ಬಳಲಿದವರಿಗೆ ತನ್ನ ಮಸಾಜು ಕಲೆ ಪ್ರದರ್ಶಿಸುತ್ತಿದ್ದನು. ಅವನಿಗೆ ಹೆಣ್ಣು ಹುಡುಕಿ ಮದುವೆ ಮಾಡುವ ಮಹಿಳಾ ಸಮಿತಿ ರಚನೆಯಾಗುವ ಮೂಲಕ ಚಾರಣ ಮುಕ್ತಾಯವಾಯಿತು.

ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಚಾರಣವೆಂದರೆ, ಪ್ರಕೃತಿಯ ಜತೆಗೆ ಮಾತ್ರವಲ್ಲ, ಮನೆ ಊರುಗಳಿಂದ ಹೊರಬಂದಾಗ ಹೊಸ ಸಂಬಂಧಗಳು ಏರ್ಪಡುವ ಜಾಗ ಕೂಡ. ಆಕಸ್ಮಿಕವಾದ ಈ ಸಂಬಂಧಗಳು ಬಳ್ಳಿಯಾಗಿ ಬೆಳೆದು ಹಣ್ಣುಕಾಯಿ ಬಿಡುವುದುಂಟು. ನಾಸಿಕದಿಂದ ಬಂದಿದ್ದ ಕಿಶೋರ್ ಶುಕ್ಲಾ, ಚಂದ್ರಖಾನಿಯಿಂದ ಬೀಳ್ಕೊಡುವಾಗ 'ನಮ್ಮೂರಿಗೊಮ್ಮೆ ಬಾ. ಪಾಂಡವರ ಗುಹೆ ತೋರಿಸುವೆ' ಎಂದಿದ್ದನು. ಹೋದೆ. ತನ್ನ ಮನೆಯಲ್ಲೇ ಉಳಿಸಿಕೊಂಡನು. ಅವನ ತಾಯಿಯ ಜತೆ ಹರಟುವಾಗ ಆಕೆಯ ವಿವಿಧ ಭಂಗಿಯ ಪಟ ತೆಗೆದೆ. ನಾನು ಮರಳಿ ಬಂದ ಬಳಿಕ ಶುಕ್ಲಾ ಕರೆ ಮಾಡಿ ಹೇಳಿದ: 'ಅಮ್ಮ ತೀರಿಹೋದರು ಕಣೊ. ನೀನು ತೆಗೆದ ಫೋಟೊ ಕಳಿಸು'. ಮತ್ತೊಮ್ಮೆ ಹೋದಾಗ ಕಂಡೆ. ಪಟ ಶುಕ್ಲನ ದೇವರ ಮನೆಯಲ್ಲಿತ್ತು.

ಪ್ರವಾಸದಲ್ಲಿ ತಮಾಶೆಯ ಸನ್ನಿವೇಶವನ್ನು ನಾನು ತಪ್ಪಿಸಿಕೊಳ್ಳುವುದಿಲ್ಲ. ನಮ್ಮ ಕೇದಾರ ಯಾತ್ರೆಯಲ್ಲಿ ಒಬ್ಬ ಮಹಿಳೆ ಬಂದಿದ್ದರು. ತುಸುಸ್ಥೂಲ. ನಡೆಯುತ್ತಿರಲಿಲ್ಲ. ಸವಾರಿ ಬೇಕು. ಅವರನ್ನು ಹೊತ್ತ ಪಾಪದ ಕುದುರೆಯ ಮುಖವನ್ನೇ ನಾನು ನೋಡುತ್ತಿದ್ದೆ. ಶ್ರೀಮತಿಯವರ

ಕವಿ ಮನಸು

ಮುಗಿಲು ಕಂಡ ನವಿಲು



ಕರಿಯ ಮುಗಿಲು ಬಾನಿನಲ್ಲಿ
ಹರಿದು ಬರುವ ಮಿಂಚಿನಲ್ಲಿ
ಹರಿದು ಹೋಗುವಂತೆ ಕಿವಿಯು
ಗುಡುಗಿನಾರ್ಭಟ
ಸುರಿಯಲಿರುವ ಮಳೆಯ ನೆನೆದು
ವಿರಹ ಬಾಧೆಯಲ್ಲಿ ನವಿಲು
ಕರೆಯಲೆಂದು ಗೆಳತಿಯನ್ನು ಕಳೆಯೆ
ಸಂಕಟ

ಗಿರಿಯ ಹತ್ತಿ ಬಂದ ನವಿಲು
ಮುರಿದ ಮರದ ಕಾಂಡವೇರಿ
ಬರದೆ ಹೋದ ಗೆಳತಿಯನ್ನು
ಹುಡುಕತೊಡಗಿತು
ಗಿರಿಯ ಸುತ್ತ ಹಸಿರು ವನವು
ಕರೆದು ಕರೆದು ಗೆಳತಿ ಬರದೆ
ಗಿರಿಯ ನವಿಲು ನೊಂದು ಮನದೆ ಸುತ್ತ
ನೋಡಿತು

ಏರಿ ಬರುವ ಗೆಳತಿಯನ್ನು
ದೂರದಲ್ಲಿ ಕಂಡ ನವಿಲು
ಮೇರೆ ಮೀರಿ ಹರುಷವುಕ್ಕಿ ನೋಡ
ತೊಡಗಿತು
ದಾರಿಯೆಲ್ಲ ಮೆತ್ತಗಾಗಿ
ಜಾರಬಹುದು ನಡೆದು ಬರಲು
ಹಾರಿಕೊಂಡು ಬೇಗ ಬರಲು ಕೂಗಿ
ಹೇಳಿತು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಪರೀಕ್ಷೆ



ಎಲ್ಲೆಲ್ಲೂ ನಿನ್ನದೇ ಯೋಚನೇ.
ಸನಿಹಕ್ಕೆ ಬಂದಂತೆಲ್ಲ ಯಾತನೆ.
ನಿನ್ನ ಗೆಲ್ಲಲು ಮಾಡುವೆ ಪ್ರಾರ್ಥನೆ.
ಭಯದ ಮೊಗವೆ ನೀಡುತ್ತಿದೆ
ನಿನ್ನ ಆಗಮನದ ಸೂಚನೆ.
ಎಂದು ಮುಗಿಯುವುದೋ
ಈ ಪರೀಕ್ಷೆ ಪರಮಾತ್ಮನೆ.
ಅಂದು ಅರ್ಪಿಸುವೆ ನಿನಗೆ
ದೊಡ್ಡ ಬಾಳೆಹಣ್ಣಿನ ಗೊನೆ.
ಸಾಕಪ್ಪ ಸಾಕು ಈ ಪರೀಕ್ಷೆ ಪ್ರತಿ ವರ್ಷ
ಬೇಸಿಗೆಯಲ್ಲಿ ನಮಗೆ ಕೊಡುವ ಬೇನೆ.

– ಮಂಜುಶ್ರೀ ಮುರಳೀಧರ್
ತೋರಣಗಲ್ಲು, ಬಳ್ಳಾರಿ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ವಿಜ್ಞಾನ ತಂತ್ರಜ್ಞಾನ ಭಾರತದ ಕಿರೀಟ

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಪ್ರಯುಕ್ತ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯ ನೋಟ

ಆಧುನಿಕ ಪ್ರಪಂಚವು ಇಂದು ವಿಜ್ಞಾನ ಮತ್ತು ತಂತ್ರಜ್ಞಾನಗಳ ಯುಗವೆನಿಸಿದೆ. ಆಹಾರ, ಗಾಳಿ, ನೀರಿನಷ್ಟೇ ಇಂದು ಜ್ಞಾನ, ಮಾಹಿತಿ ಇತ್ಯಾದಿಗಳು ಅತ್ಯಂತ ಅವಶ್ಯಕವೆನಿಸಿವೆ. ಇವೆಲ್ಲವೂ ಒಂದೇ ವಿಷಯವನ್ನು ಪರಸ್ಪರ ಅವಲಂಬಿಸಿವೆ. ವೈಜ್ಞಾನಿಕ, ತಂತ್ರಜ್ಞಾನವೂ ಅದ್ಭುತ ಪ್ರಗತಿ ಸಾಧಿಸಿ ಮನುಷ್ಯನನ್ನು ಭಗವಂತನೇ ಅಚ್ಚರಿಪಡುವಷ್ಟು ಶಕ್ತಿಶಾಲಿಯಾಗುವಂತೆ ಮಾಡಿದೆ ಇಂದು ಮಾನವ ಕಾಲದೊಡನೆ ಸ್ಪರ್ಧಿಸುತ್ತಾ ಅಂತರೀಕ್ಷವನ್ನೇ ಜಯಿಸಿದ್ದಾನೆ. ಇದುವರೆಗೆ ಅಜ್ಞಾತವಾಗಿದ್ದ ಎಷ್ಟೋ ವಿಷಯಗಳನ್ನು ಮತ್ತು ಪ್ರಕೃತಿಯಲ್ಲಿ ಅಡಗಿರಬಹುದಾದ ಸಮಸ್ತ ರಹಸ್ಯಗಳನ್ನು ಅನಾವರಣಗೊಳಿಸಲು ಶಕ್ತನಾಗಿದ್ದಾನೆ. ಒಂದೇ ಮಾತಿನಲ್ಲಿ ಹೇಳಬಹುದಾದರೆ ಮಾನವನಿಗೆ ಅಗೋಚರವಾದ ಅಥವಾ ಅವನ ಅರಿವಿಗೆ ಬಾರದಿರುವ ಯಾವ ಕ್ಷೇತ್ರವೂ ಉಳಿದಿಲ್ಲ.

ಭಾರತದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ಸಂಬಂದಿಸಿದ ಸಂಶೋದನೆ ಪ್ರಾಚೀನ ಕಾಲದಿಂದಲೂ ಪರಿಚಿತವಾದ ಕ್ಷೇತ್ರಗಳೇ ಆಗಿದೆ.ಪಾಶ್ಚಾತ್ಯರ ಸಂಪರ್ಕದಿಂದ ಅವುಗಳ ಹೆಸರು, ವಿಮರ್ಶೆ ಇತ್ಯಾದಿಗಳು ಬೇರೆ ಬೇರೆ ದೃಷ್ಟಿಕೋನಗಳಲ್ಲಿ ಬೆಳಕಿಗೆ ಬಂದಿರಬಹುದು. ಆದರೆ ಆ ದಿಸೆಯಲ್ಲಿ ಪ್ರಾಚೀನ ಭಾರತದ ಋಷಿ ಮುನಿಗಳ ಕಾಲದಿಂದಲೂ, ಅಗ್ರಸ್ಥಾನದಲ್ಲಿದೆ.ಎಂದು ಹೇಳಬಹುದು. ಆ ಕೀರ್ತಿ ಈಗಲೂ ಕೆಲವು ಕ್ಷೇತ್ರಗಳಲ್ಲಿ ನಮ್ಮದಾಗಿಯೇ ಉಳಿದುಕೊಂಡಿದೆ.

ಸ್ವಾತಂತ್ರ್ಯ ಬಂದ ಮೇಲೆ ಈ ಕ್ಷೇತ್ರಗಳಲ್ಲಿ ಅನೇಕ ಸಂಶೋದನಾ ಕೇಂದ್ರಗಳನ್ನು ಹಾಗೂ ಆ ವಿಷಯಗಳಲ್ಲಿ ತಂತ್ರಜ್ಞಾನವನ್ನು ಕೊಡುವ ಶಿಕ್ಷಣ ಕೇಂದ್ರಗಳನ್ನೂ ನಾವು ಸ್ಥಾಪಿಸಿದ್ದೇವೆ. ಇದರ ಪರಿಣಾಮವಾಗಿ ಯಾವುದೇ ಭಾರತೀಯನು ಹೆಮ್ಮೆ ಪಡುವಷ್ಟರ ಹಾಗೂ ಆತ್ಮ ಶಕ್ತಿ ಹೊಂದುವಷ್ಟರ ಮಟ್ಟಿಗೆ ಈ ಕ್ಷೇತ್ರ ಅಭಿವೃದ್ಧಿ ಸಾಧಿಸಿದೆ. ಆದರೂ ಈ ಕ್ಷೇತ್ರದಲ್ಲಿ ಸಾಧಿಸಬೇಕಾದುದು ಇನ್ನೂ ಇದೆ. ವೈಜ್ಞಾನಿಕ ಸಂಶೋದನೆಗಳು ಅನೇಕ ಕ್ಷೇತ್ರದಲ್ಲಿ ಅಂದರೆ ಶುದ್ಧ ವಿಜ್ಞಾನ, ತಂತ್ರಜ್ಞಾನ, ವ್ಯವಸಾಯ, ಪರಮಾನು ಸಂಶೋಧನೆ, ಬಾಹ್ಯಾಕಾಶ ಸಂಶೋಧನೆ ಹಾಗೂ ರಕ್ಷಣಾ ಕ್ಷೇತ್ರಗಳಲ್ಲಿ ನಾವು ಅಪಾರವಾದ ಯಶಸ್ಸನ್ನು ಗಳಿಸಿದ್ದೇವೆ. ಆದರೂ ನಮ್ಮದು ಅಭಿವೃದ್ಧಿಶೀಲ ರಾಷ್ಟ್ರವಾಗಿದೆ ಹೊರತು ಸಂಪೂರ್ಣ ಅಭಿವೃದ್ಧಿ ರಾಷ್ಟ್ರವೆನಿಸಿಲ್ಲ. ಆ ದಿಸೆಯಲ್ಲಿ ನಮ್ಮ ಪ್ರಯತ್ನ ಸತತವಾಗಿ ಸಾಗುತ್ತಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ವೈಜ್ಞಾನಿಕ ಸಂಶೋಧನಾ ಕೇಂದ್ರಗಳನ್ನು ಹೊಂದಿವೆ. ಸುಮಾರು 200 ಸಂಶೋಧನಾ ಕೇಂದ್ರಗಳಿವೆ ಎಂದು ಅಂದಾಜು, ಇವೆಲ್ಲವೂ ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಸಹಕರಿಸುತ್ತಿವೆ. ನಮ್ಮ ದೇಶದ ತಂತ್ರಜ್ಞಾನದ ನಿಲುವು ಹಾಗೂ ತತ್ವಗಳು ಉತ್ತಮ ಯೋಜನೆಗಳ ತಳಹದಿಯಲ್ಲಿ ಸಾಗಿವೆ. ಮೂಲ ಹಾಗೂ ಸ್ವಾಭಾವಿಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಯಾವುದೇ ಅಗತ್ಯ ತಂತ್ರಜ್ಞಾನವನ್ನು ಹೊರಗಿನಿಂದ ಪಡೆದರೂ ನಮ್ಮ ತಂತ್ರಜ್ಞಾನದೊಂದಿಗೆ ಹೊಂದಿಸಿಕೊಳ್ಳುವಷ್ಟು ಸಮರ್ಥವಾಗುವ ರೀತಿಯಲ್ಲಿ ಸಾಗುವುದೇ ನಮ್ಮ ಗುರಿಯಾಗಿದೆ. ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ನಾವು ಪರಾವಲಂಬಿಗಳಾಗದೆ ದೇಶದ ವೈಜ್ಞಾನಿಕ ತಂತ್ರಜ್ಞಾನದ ಅಗತ್ಯಗಳನ್ನು ಪೂರೈಸುವಷ್ಟೂ ಸಾಮರ್ಥ್ಯ ಪಡೆಯುವುದೇ ನಮ್ಮ ಮುಖ್ಯ ಗುರಿಯಾಗಿದೆ. ಇದರ ಪರಿಣಾಮವಾಗಿ ತಂತ್ರಜ್ಞಾನವೂ ನಮ್ಮ ಮುಖ್ಯ ಉದ್ಯಮವೆನಿಸಿಕೊಂಡು ಆ ಕ್ಷೇತ್ರದಲ್ಲಿ ನಂಬಲರ್ಹವಾದ ಸಂಶೋಧನೆ, ತರಬೇತಿ ಮತ್ತು ಅಭಿವೃದ್ಧಿ ಸಾದಿಸುತ್ತಿದ್ದೇವೆ.

ವ್ಯವಸಾಯದ ಕ್ಷೇತ್ರದಲ್ಲಿ ನಮ್ಮ ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋಧನೆಗಳ ಪರಿಣಾಮವಾಗಿ ಇಂದು ನಾವು ಆಹಾರ ಧಾನ್ಯಗಳಲ್ಲಿ ಸ್ವಾವಲಂಬಿಗಳೂ ಮತ್ತು ಸ್ವಪರಿಪೂರ್ಣರೂ ಆಗಿರುತ್ತೇವೆ. ಇಂದು ನಾವು ಬರಗಾಲ, ಪ್ರವಾಹದಂತಹ ಪ್ರಕೃತಿ ವಿಕೋಪಗಳ ಸಮಯದಲ್ಲೂ ಕಂಗೆಡದಂತೆ ಅವುಗಳನ್ನು ಎದುರಿಸುವಷ್ಟು ಆಹಾರ ಧಾನ್ಯ ಸಂಗ್ರಹದಲ್ಲಿ ಸಮರ್ಥರಾಗಿದ್ದೇವೆ. ಇದರೊಂದಿಗೆ ನಾವು ಆಹಾರ ಧಾನ್ಯವನ್ನು ರಫ್ತು ಮಾಡುವ ಸ್ಥಿತಿಯಲ್ಲಿದ್ದೇವೆ.

ಆಹಾರದೊಂದಿಗೆ ಹಾಲಿನ ಉತ್ಪಾದನೆಯಲ್ಲೂ ಪ್ರಗತಿ ಸಾಧಿಸಿ ಕ್ಷೀರಕ್ರಾಂತಿಯನ್ನೇ ಉಂಟು ಮಾದುತ್ತಿದ್ದೇವೆ. ಇದಕ್ಕೆಲ್ಲಾ ಕಾರಣ ನಮ್ಮ ವೈಜ್ಞಾನಿಕ ಸಂಶೋಧನೆ ಮತ್ತು ನಮ್ಮ ರೈತರು ನಮ್ಮ ತಂತ್ರಜ್ಞಾನದಲ್ಲಿತ್ತಿರುವ ನಂಬಿಕೆ ಹಾಗೂ ಅದರ ಸದುಪಯೋಗದಿಂದ ಸಾಧ್ಯವಾಯಿತೆಂದು ತಿಳಿಯಬಹುದು. ಸಕಾಲದಲ್ಲಿ ಉತ್ತಮ ತಳಿಯ ಬೀಜ ಸರಬರಾಜು, ಬೆಳೆಗಳ ಸಂರಕ್ಷಣೆ, ಸಮತೋಲನ ವ್ಯವಸಾಯಕ್ರಮ, ಉತ್ತಮ ನೀರಾವರಿ ವ್ಯವಸ್ತೆಗಳ ಮೂಲಕ ಈ ಸಾಧನೆ ಸಾಧ್ಯವಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿಯೇ ಇಂದು ನಾವು ಅತ್ಯಂತ ಮಹತ್ವದ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ನಾವಿಂದು ಪ್ರಪಂಚದ ಮುಖ್ಯ ಕೈಗಾರಿಕಾ ಶಕ್ತಿಕೆಂದ್ರವಾಗಿದ್ದೇವೆ. ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ (CSIR) ತನ್ನ ಸಂಶೋಧನಾ ಕೇಂದ್ರದಿಂದ ಪ್ರಾಯೊಜಿಸಲ್ಪಟ್ಟಿರುವ ಸಂಶೋಧನೆಗಳು ಈ ಬಗೆಯ ಅಭಿವೃದ್ಧಿಗೆ ನೆರವಾಗಿವೆ. ಇಂದು ನಾವು ಪ್ರಪಂಚದ ಆರು ಅಭಿವೃದ್ಧಿ ರಾಷ್ಟ್ರಗಳೊಂದಿಗೆ ಸೇರಿದ್ದೇವೆ. ಅದರಲ್ಲೂ

ಪೂನಾದಲ್ಲಿ ಸ್ಥಾಪಿತವಾಗಿರುವ ಕಂಪ್ಯೂಟರ್ ಸಂಶೋಧನಾ ಕೇಂದ್ರವೂ (ಸೂಪರ್ ಕಂಪ್ಯೂಟರ್) ಅಭಿವೃದ್ಧಿ ರಾಷ್ಟ್ರದ ಮಾನ್ಯತೆ ಗಳಿಸಿಕೊಳ್ಳಲು ಸಹಾಯ ಮಾಡಿದೆ. ನಮ್ಮ ರಾಷ್ಟ್ರದಲ್ಲಿ ಪರಮಾಣು ಸಂಶೋಧನಾ ಆಯೋಗವನ್ನು 1948 ರಲ್ಲಿ ಸ್ಥಾಪಿಸಲಾಯಿತು. ಶಾಂತಿ ಪ್ರಕ್ರಿಯೆಗಳಿಗೆ ಪರಮಾಣುವಿನ ಉಪಯೋಗವೆಂಬ ಉದ್ದೇಶ ಹೊಂದಿ ಅದರ ಸ್ಥಾಪನೆಯಾಯಿತು. ಅಣುಶಕ್ತಿ ಇಲಾಖೆ ಎಂಬ ವಿಭಾಗವನ್ನು ಇದಕ್ಕಾಗಿ ತೆರೆಯಲಾಯಿತು. ಮುಂಬೈ ಬಳಿ ಸ್ಥಾಪಿಸಿರುವ ಟ್ರಾಂಬೆ , ಭಾ ಭಾ ಆಟೋಮಿಕ್ ರಿಸರ್ಚ್ ಸೆಂಟರ್ ನಮ್ಮ ದೇಶದ ಅತ್ಯಂತ ದೊಡ್ಡ ಕೇಂದ್ರವಾಗಿ ನ್ಯೂಕ್ಲಿಯರ್ ಸಂಶೋಧನೆಯ ನಿರ್ದೇಶನದ ಜವಾಬ್ದಾರಿ ಹೊತ್ತಿದೆ. ಈಗ ನಮ್ಮ ದೇಶದಲ್ಲಿ ಸೈರಸ್, ಧ್ರುವ, ಜೆರಿನಾ ಮತ್ತು ಪೂರ್ಣಿಮಾ ಸೇರಿ ಒಟ್ಟು ಐದು ಪರಮಾಣು ಸಂಶೋಧನಾ ಕೇಂದ್ರಗಳಿವೆ. ಇದುವರೆಗೆ ನಾವು ರಾಜಸ್ಥಾನದ ಪೋಖ್ರಾನ್ ನಲ್ಲಿ ಎರಡು ಬಾರಿ ಭೂಗರ್ಭದ ನ್ಯೂಕ್ಲಿಯರ್ ಟೆಸ್ಟ್ ಗಳನ್ನು ನಡೆಸಿದ್ದೇವೆ. ನಮ್ಮ ವಿಜ್ಞಾನಿಗಳ ಈ ಮಹತ್ವದ ಸಾಧನೆಯಿಂದ ಈ ದಿಸೆಯಲ್ಲಿ ಪ್ರಮುಖ ಸ್ಥಾನದಲ್ಲಿರುವ ಕೆಲವೇ ರಾಷ್ಟ್ರಗಳ ಸಾಲಿನಲ್ಲಿ ನಮ್ಮ ರಾಷ್ಟ್ರವೂ ಸ್ಥಾನ ಪಡೆಯುವಂತಾಯಿತು. ಪ್ರಪಂಚದ ಏಳು ರಾಷ್ಟ್ರಗಳ ಸಾಲಿನಲ್ಲಿ ಭಾರತ ಅಣು ರಿಯಾಕ್ಟರ್ ತಂತ್ರಜ್ಞಾನದ ಹೊಂದಿರುವ ರಾಷ್ಟ್ರವಾಗಿ ಸೇರ್ಪಡೆ ಹೊಂದಿದೆ. ಚೆನ್ನೈನ ಕಲ್ಪಕಂನಲ್ಲಿ ಇಂದಿರಾಗಾಂಧಿ ಆಟೋಮಿಕ್ ರಿಸರ್ಚ್ ಸೆಂಟರ್ ನಲ್ಲಿ ಈ ಬಗೆಯ ಸಂಶೋಧನೆ ನಡೆಯುತ್ತಿದೆ.

ಆಕಾಶಯಾನ ಕ್ಷೇತ್ರದಲ್ಲಿ ಭಾರತವೂ ಯಶಸ್ಸು ಸಾಧಿಸಿದೆ. ಪಿ ಎಸ್ ಎಲ್ ವಿ (ಕಖಐಗಿ) ಡಿ –2. ಉಡಾವಣೆ 19942 ರ ಅಕ್ಟೋಬರ್ ನಲ್ಲಿ ಯಶಸ್ವಿಯಾಗಿ ನಡೆಯಿತು. 1992ರಲ್ಲಿ ಇನ್ಸಾಟ್–3 ಉಪಗ್ರಹಗಳ ಉಡಾವಣೆ ಪ್ರಾರಂಭದೊಂದಿಗೆ ಪ್ರಪಂಚದ ಅತ್ಯಂತ ಕ್ಲಿಷ್ಟ ವ್ಯವಸ್ಥೆ ಹೊಂದಿರುವ ಉಪಗ್ರಹಗಳ ಉಡಾವಣೆಯನ್ನು ನಾವು ಸಾಧಿಸಬಲ್ಲೆವೆಂಬುದನ್ನು ಸಾಧಿಸಿ ತೋರಿಸಿದ್ದೇವೆ. ನಮ್ಮ ಈ ಹಿಂದಿನ ಉಡಾವಣೆಗಳಾದ ಖಐಗಿ –3, ಮತ್ತು ಖಐಗಿ ಗಳು ಕೇವಲ ನಮ್ಮ ಉತ್ತಮ ವ್ಯವಸ್ಥೆಯ ಮಾದರಿಗಳಾಗಿದ್ದುವು. ಕಖಐಗಿ ಒಂದು ಟನ್ ತೂಕದ ಉಪಗ್ರಹವನ್ನು ಅಂತರೀಕ್ಷಕ್ಕೆ 1000 ಕಿ.ಮೀ. ವರೆಗೂ ಹಾರಿಬಿಡುವ ಸಾಮರ್ಥ್ಯ ಹೊಂದಿದೆ ಎಂಬುದನ್ನು ತೋರಿಸಿಕೊಟ್ಟಿದೆ. ನಂತರದ ಉಖಐಗಿ 2.5 ಟನ್ ತೂಕಗಳೊಂದಿಗೆ 26000 ಕಿ.ಮೀ. ದೂರ ಸಾಗಬಲ್ಲದಾಗಿತ್ತು. ಉಖಐಗಿ –2ನ್ನು 2003 ರ ಮೇ ತಿಂಗಳಲ್ಲಿ ಹಾರಿಬಿಡಲಾಯಿತು. ಈ ಯಶಸ್ವೀ ಕಾರ್ಯ ಸಾಧನೆಯ ನಿಯಂತ್ರಣವನ್ನು ಇಸ್ರೋ ಬಾಹ್ಯಾಕಾಶ ಸಂಶೋಧನಾ ಕೇಂದ್ರವೂ ಪೂರ್ವಯೋಜಿತ ಕಾರ್ಯಕ್ರಮಗಳನ್ನು ಹೊಂದಿ ಇತರ ಉಪಗ್ರಹಗಳೊಡನೆ ಸಂಪರ್ಕ ಸಾಧಿಸುತ್ತಿದೆ. ದಿನಾಂಕ 10–1–2007 ರಂದು ಪಿ ಎಸ್ ಎಲ್ ಗಿಅ – 7 ಉಡಾವಣಾ ವಾಹನದ ಮೂಲಕ ಏಕಕಾಲದಲ್ಲಿ ನಾಲ್ಕು ಉಪಗ್ರಹಗಳನ್ನು ಕಕ್ಷೆಗೆ ಸೇರಿಸುವ ಮೂಲಕ ಮಹತ್ವದ ಮೈಲಿಗಲ್ಲು ಸ್ಥಾಪಿಸಿದೆ. 650 ಕೆ.ಜಿ. ತೂಕದ ಸ್ಪೇಸ್ ಕ್ಯಾಪ್ಸುಲ್ ಖಖಇ –1 ಶ್ರೀ –1 ನ್ನು ಬಾಹ್ಯಾಕಾಶಕ್ಕೆ ಕಳುಹಿಸಿರುವ ಭಾರತ ಮರು ಪ್ರವೇಶ ತಂತ್ರಜ್ಞಾನ ಸಾಧಿಸುತ್ತಿದೆ. ಚಂದ್ರಯಾನಕ್ಕೆ 2 ಮತ್ತು ಚಂದ್ರಯಾನ 3 ಯಶಸ್ಸು ಪಡೆದಿದೆ. ಚಂದ್ರನ ದಕ್ಷಿಣ ತುದಿಗೆ ಕಾಲ ಇಟ್ಟ ಮೊದಲ ದೇಶವಾಗಿದೆ ಸೂರ್ಯ ಬೇಸಿಗೆ ಉಪಗ್ರಹ ಕಳುಹಿಸುವ ಯೋಜನೆ ಸಹ ಇದು ಸಿದ್ದತೆಯಾಗುತ್ತಿದೆ. .

ಇತ್ತೀಚೆಗೆ ನಮ್ಮ ಸಾಧನೆಗಳ ಕಿರೀಟಕ್ಕೆ ಮತ್ತೊಂದು ಗರಿ ಎಂಬಂತೆ 'ಅಂಟಾರ್ಟಿಕಾ' ಪ್ರದೇಶವು ವೈಜ್ಞಾನಿಕ ಕ್ಷೇತ್ರದಲ್ಲಿ ನಮ್ಮ ಬುದ್ಧಿಮತ್ತೆಯನ್ನು ಸಮರ್ಥಿಸುತ್ತದೆ. ಈ ಹಿಮಖಂಡದಲ್ಲಿ ಎರಡು ಸ್ಥಿರ ಕೇಂದ್ರಗಳಿವೆ. ವಿಜ್ಞಾನಿಗಳು, ಸಾಗರ ಯಾನ ತಜ್ಞರು, ಮತ್ತು ತಂತ್ರಜ್ಞರು ಆ ಅಂಟಾರ್ಟಿಕಾ ಖಂಡವನ್ನು ಪ್ರವೇಶಿಸಿ ಸಂಶೋಧನೆ ನಡೆಸಿದ್ದಾರೆ.

ರಕ್ಷಣಾ ಕ್ಷೇತ್ರದಲ್ಲೂ ನಾವು ಮೆಚ್ಚುವಂತಹ ಕಾರ್ಯ ಮಾಡಿದ್ದೇವೆ. ಪೃಥ್ವಿ ನಾಗ್, ಮುಂತಾದ ಕ್ಷಿಪಣಿಗಳನ್ನು ತಯಾರಿಸಿ ಯಶಸ್ವಿಯಾಗಿ ಪ್ರಯೋಗ ಮಾಡಿದ್ದೇವೆ. ಬೆಂಗಳೂರಿನ ಊಂಐ ಹಗುರ ಯುದ್ದ ಹೆಲಿಕಾಪ್ಟರ್ ತಯಾರಿಸಿದೆ.

ಈ ಬಗೆಯ ಅತ್ಯಾಧುನಿಕ ತಂತ್ರಜ್ಞಾನ ಹೊಂದಿ ದೇಶದ ಅಭಿವೃದ್ಧಿ ಸಾಧನೆಗೆ ನೆರವಾಗುತ್ತಿದ್ದರೂ ಸಾಧಿಸಬೇಕಾದುದು ಇನ್ನೂ ಎಷ್ಟೋ ಇವೆ. ನಮ್ಮ ಪ್ರಯೋಗಗಳು, ಸಂಶೋಧನೆಗಳು ಜನಸಾಮಾನ್ಯರನ್ನು ತಲುಪುವುದು ಅತಿ ಮುಖ್ಯವಾದುದು. ಸಾಮಾನ್ಯ ಜನರ ಜೀವನ ಸುಖಮಯವಾಗಿ ಅವರ ಬದುಕು ಹಸನು ಮಾಡುವುದೇ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಮೂಲ ಉದ್ದೇಶವಾಗಿದೆ. ಎಲ್ಲಾ ರಾಷ್ಟ್ರಗಳೂ ಇದನ್ನು ಮನಗಂಡಾಗ ಪ್ರಪಂಚ ಶಾಂತಿಯ ನಿಟ್ಟುಸಿರು ಬಿಡಲು ಸಾಧ್ಯ. ಕಾಲಾನಂತರದಲ್ಲಿ, ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿಶೀಲವಾಗಿ ಮತ್ತು ಗ್ರಹಿಸಬಹುದಾದ ರೀತಿಯಲ್ಲಿ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿದೆ.

ಭಾರತದಲ್ಲಿ 21 ನೇ ಶತಮಾನವು ವಿಜ್ಞಾನ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಮತ್ತು ಜ್ಞಾನದ ಮೂಲವನ್ನು ಪುಷ್ಟೀಕರಿಸುವ ವಿಷಯದಲ್ಲಿ ಪ್ರಗತಿಯತ್ತ ಪ್ರಾರಂಭವಾಗಿದೆ ಎಂದು ಸ್ಪಷ್ಟವಾಗಿ ಗುರುತಿಸಲಾಗಿದೆ. ಪ್ರಸ್ತುತ, ಸುಧಾರಿತ ತಂತ್ರಜ್ಞಾನದ ವಿಷಯದಲ್ಲಿ ಭಾರತವು ಬಲವಾದ ಸ್ಥಾನವನ್ನು ಹೊಂದಿದೆ. ಭಾರತವು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪೂರೈಸುವ ಅನೇಕ ಸಂಸ್ಥೆಗಳ ಅಸ್ತಿತ್ವದೊಂದಿಗೆ ಜ್ಞಾನದ ಉಗ್ರಾಣವಾಗಿಯೂ ಕಾರ್ಯನಿರ್ವಹಿಸುತ್ತದೆ, ಅದು ಅರ್ಹ ಮತ್ತು ತರಬೇತಿ ಪಡೆದ ಮಾನವಶಕ್ತಿಯೊಂದಿಗೆ ಬರುತ್ತದೆ.

ನಾಮಫಲಕಗಳಲ್ಲಿ ಕನ್ನಡ ಬಳಸಿ

■ ಹಂಪಿ ಟೈಮ್ಸ್ ಬಳ್ಳಾರಿ

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಉದ್ದಿಮೆದಾರರು ತಮ್ಮ ಉದ್ದಿಮೆಯ ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡವನ್ನು ಬಳಸಬೇಕು. ತಪ್ಪಿದಲ್ಲಿ ಉದ್ದಿಮೆಗಳ ಪರವಾನಿಗೆಗಳನ್ನು ರದ್ದುಪಡಿಸಿ ಉದ್ದಿಮೆಯನ್ನು ಸ್ಥಗಿತಗೊಳಿಸಲು ಕ್ರಮವಹಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತ ಎಸ್. ಖಲೀಲ್‌ಸಾಬ್ ಅವರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕನ್ನಡವು ಆಡಳಿತ ಭಾಷೆಯಾಗಿದ್ದು, ಎಲ್ಲಾ ಉದ್ದಿಮೆಗಳ ನಾಮಫಲಕಗಳಲ್ಲಿ ಶೇ.60 ರಷ್ಟು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಸುವಂತೆ ಸರ್ಕಾರದಿಂದ ಕಾಯ್ದೆ ಜಾರಿಯಾಗಿದೆ.

ಸರ್ಕಾರದ ಆದೇಶದನ್ವಯ ಯಾವುದೇ ಉದ್ದಿಮೆಯ ನಾಮಫಲಕವು ಪ್ರಧಾನವಾಗಿ ಶೇ.60 ರಷ್ಟು ಸ್ಥಳ ಮೀಸಲಿರಿಸಿ ಕನ್ನಡದಲ್ಲಿರಬೇಕು. ನಾಮಫಲಕದಲ್ಲಿ ಕನ್ನಡ ಭಾಷೆ ಮೇಲ್ಭಾಗದಲ್ಲಿ ಪ್ರದರ್ಶಿತವಾಗುವಂತೆ ಹಾಗೂ ಅನ್ಯಭಾಷೆಯ ನಾಮಫಲಕಕ್ಕಿಂತ ಕನ್ನಡ ನಾಮಫಲಕ ಮೇಲ್ಭಾಗದಲ್ಲಿರುವಂತೆ ಮತ್ತು ದೊಡ್ಡದಾಗಿರುವಂತೆ ಅಳವಡಿಸಬೇಕು.

ಮಾರ್ಚ್ 03 ರೊಳಗಾಗಿ ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲ

ಹೊಸಪೇಟೆ ನಗರಸಭೆ ಬಜೆಟ್ ಮುಖ್ಯಾಂಶಗಳು

■ ಸಗಟು ನೀರಿನ ವ್ಯವಸ್ಥೆ ಸುಧಾರಣೆಗಾಗಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ಯೋಜನೆಯಲ್ಲಿ 20 ಕೋಟಿ 73 ಲಕ್ಷ ರೂ. ಅನುದಾನ ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆ.

■ 2023–24ರಲ್ಲಿ ಬೀದಿ ಬದಿ ವ್ಯಾಪರಿಗಳಿಗೆ ಬೆಂಬಲ ಉಪಘಟಕ ಅಡಿ ಮಾರುಕಟ್ಟೆ ನಿರ್ಮಾಣಕ್ಕಾಗಿ 32.65 ಲಕ್ಷ ರೂ. ಅನುದಾನ ಬಿಡುಗಡೆಯಾಗಿರುತ್ತದೆ. 2024–25 ರಲ್ಲಿ ಇನ್ನು 3 ಬೀದಿ ಬದಿ ಮಾರುಕಟ್ಟೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದು.

■ ಜಾಹೀರಾತು ತೆರಿಗೆ 5.00 ಲಕ್ಷ ರೂ., ವ್ಯಾಪರ ಪರವಾನಿಗೆ ಶುಲ್ಕ 80 ಲಕ್ಷ ರೂ., ವಾಣಿಜ್ಯ ಮಳಿಗೆಗಳಿಂದ ಬಾಡಿಗೆ 90 ಲಕ್ಷ ರೂ., ನೀರು ಸರಬರಾಜು ಶುಲ್ಕಗಳು 1 ಕೋಟಿ 72 ಲಕ್ಷ 55 ಸಾವಿರ ರೂ., ಹಾಗು ಒಳಚರಂಡಿ ಶುಲ್ಕಗಳು 2 ಕೋಟಿ 80 ಲಕ್ಷ ರೂ., ಘನ ತ್ಯಾಜ್ಯ ನಿರ್ವಹಣೆ ಕರ 3 ಕೋಟಿ 20 ಲಕ್ಷ ರೂ., ಆದಾಯ ಅಂದಾಜಿಸಲಾಗಿರುತ್ತದೆ.

■ 2023–24ರಲ್ಲಿ ಡಿಸೆಂಬರ್ ಅಂತ್ಯಕ್ಕೆ ವ್ಯಾಪರ ಪರವಾನಿಗೆ ಶುಲ್ಕಗಳು 13.90 ಲಕ್ಷ ರೂ. ಮಳಿಗೆಗಳಿಂದ ಬಾಡಿಗೆ 15.56 ಲಕ್ಷ ರೂ., ಹಾಗು ನೀರು ಸರಬರಾಜು ಶುಲ್ಕ 51.86 ಲಕ್ಷ ರೂ. ಮಾತ್ರವೇ ಸ್ವೀಕೃತಿಯಾಗಿದೆ.

■ ಕುಡಿಯುವ ನೀರು–24/7 & ಒಳಚರಂಡಿ ವ್ಯವಸ್ಥೆ ಒಟ್ಟು 35 ವಾರ್ಡುಗಳಿಗೆ ಲಭ್ಯವಾಗುವಂತೆ ಕ್ರಮ ವಹಿಸಲು ಕಾರ್ಯಸೂಚಿ ಸಿದ್ಧಪಡಿಸುವುದು.

■ 6500 ವಸತಿ ರಹಿತರಿಗಾಗಿ ಮತ್ತು ನಿವೇಶನ ರಹಿತರಿಗಾಗಿ ಕೆ.ಎಮ್.ಇ.ಆರ್.ಎಲ್ ಯೋಜನೆ ಅಡಿಯಲ್ಲಿ 150ಕೋಟಿ ಪ್ರಸ್ತಾವನೆ ಸಲ್ಲಿಕೆಗಾಗಿ ಅಗತ್ಯ ಕ್ರಮ ವಹಿಸಲಾಗುವುದು.

■ ನಗರಸಭೆ ನೌಕರರು/ಅಧಿಕಾರಿಗಳು ರೂ1.50ಕೋಟಿ ವೆಚ್ಚದಲ್ಲಿ ವಸತಿ ಗೃಹ ನಿರ್ಮಾಣ/ಪೌರ ಸೇವಾ ನೌಕರರ ಕಾಲೋನಿ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಗಾಗಿ ಕ್ರಮವಹಿಸಲಾಗುವುದು.

■ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ಅನುದಾನ ಅಡಿಯಲ್ಲಿ ಪ.ಜಾ/ಪ.ಪಂ ಕ್ಷೇಮಾಭಿವೃದ್ಧಿಗಾಗಿ, ಶೇ. 7.25, ಇತರೆ ಹಿಂದುಳಿದ ವರ್ಗಗಳು ಹಾಗು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಮತ್ತು ಶೇ. 5 ರಲ್ಲಿ ವಿಕಲಚೇತನರ ಕ್ಷೇಮಾಭಿವೃದ್ಧಿ.

■ ಪತ್ರಕರ್ತರಿಗೆ ಲ್ಯಾಪ್ ಟಾಪ್ ಖರೀದಿಸಿ ವಿತರಿಸುವುದು (ವಿಶೇಷ ಪ್ರಕರಣ: ಜಿಲ್ಲಾಧಿಕಾರಿಗಳಿಂದ ಅನುಮೋದನೆ ಷರತ್ತಿಗೊಳಪಟ್ಟು) ಅಂದಾಜು ಮೊತ್ತ ರೂ:15ಲಕ್ಷಗಳ ವೆಚ್ಚ ಅಂದಾಜಿಸಲಾಗಿರುತ್ತದೆ.

■ 15ನೇ ಹಣಕಾಸು ಯೋಜನೆ 2021–22 ಮಿಲಿಯನ್ ಪ್ಲಸ್ (ಬಿಬಿಎಂಪಿ) ಹಂಚಿಕೆಯಾದ ಮೊತ್ತವನ್ನು ನಗರಸಭೆಗಳಿಗೆ ಸರ್ಕಾರದಿಂದ ಮರು ಹಂಚಿಕೆ ಮಾಡಲಾಗಿದ್ದು 3 ಕೋಟಿ 66 ಲಕ್ಷ ರೂ.ಗಳಲ್ಲಿ ಕುಡಿಯುವ ನೀರು ಘಟಕದಡಿ 183 ಲಕ್ಷ ರೂ. ಹಾಗು ಎಸ್.ಡಬ್ಲು.ಎಂ ಘಟಕದಡಿ 46 ಟಿ/ಪಿ/ಡಿ ಎಂ.ಆರ್.ಎಫ್. ಘಟಕ ನಿರ್ಮಾಣಕ್ಕಾಗಿ 183 ಲಕ್ಷಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಸಲ್ಲಿಸಲಾಗಿರುತ್ತದೆ.

ಆಧುನಿಕ ಕೃಷಿ ಆದಾಯ ತರಲಿದೆ

ಹರಿಹರ ಪೀಠಾಧೀಶ್ವರ ವಚನಾನಂದ ಮಹಾಸ್ವಾಮೀಜಿ ಹೇಳಿಕೆ

ಪಂಚಮಸಾಲಿ ಯುವಜನತೆ ಸಂಘಟಿತರಾಗಿ ಸಮಾಜಸೇವೆ ಮಾಡಬೇಕು

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ರಾಜ್ಯದಲ್ಲಿ ಪಂಚಮಸಾಲಿ ಸಮುದಾಯದ ಯುವಜನತೆ ಸಂಘಟಿತರಾಗಿ ಸಮಾಜಸೇವೆ ಮಾಡಬೇಕು ಎಂದು ವೀರಶೈವ ಪಂಚಮಸಾಲಿ ಲಿಂಗಾಯತ ಸಮುದಾಯದ ಹರಿಹರ ಪೀಠಾಧೀಶ್ವರರಾದ ವಚನಾನಂದ ಮಹಾಸ್ವಾಮೀಜಿ ಕರೆ ನೀಡಿದರು.

ಪಟ್ಟಣದ ಹರ ದೇಗುಲದ ಭವನದಲ್ಲಿ ಸಮುದಾಯದ ತಾಲೂಕು ಘಟಕದಿಂದ ಹಮ್ಮಿಕೊಳ್ಳಲಾಗಿದ್ದ, ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು. ಈ ಸಂಘಟನೆಗಾಗಿ ತಾವು ರಾಜ್ಯಾಧ್ಯಂತ ಗ್ರಾಮ ಸಂಚಾರ ಕಾರ್ಯಕ್ರಮವನ್ನು ಶೀಘ್ರದಲ್ಲೇ ಹಾಕಿಕೊಳ್ಳಲಾಗುವುದು ಎಂದು ತಿಳಿಸಿದ ಅವರು, ಸಮುದಾಯದವರು ಕೃಷಿಯಲ್ಲಿ ಬದುಕು ಕಟ್ಟಿಕೊಂಡವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ, ಕೃಷಿಯಲ್ಲಿಯೇ ಆಧುನಿಕ ವ್ಯವಸಾಯದಲ್ಲಿ ತೊಡಗಿಕೊಳ್ಳುವ ಮೂಲಕ ಉತ್ತಮ ಇಳುವರಿ ಮತ್ತು ಲಾಭಾಂಶ ಪಡೆಯಬೇಕು ಎಂದು ಕಿವಿಮಾತು ಹೇಳಿದರು.

ಸಮುದಾಯದ ಜಿಲ್ಲಾಧ್ಯಕ್ಷ ಪ್ರಕಾಶ್ ಪಾಟೀಲ್ ಮಾತನಾಡಿ, ತಾಲೂಕಿನಲ್ಲಿ ಉತ್ತಮ ಸಂಘಟನೆಯಿದ್ದು, ಸಮಾಜದ ಅನೇಕ ಜನಪರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಮೂಲಕ ಎಲ್ಲಾ ಸಮುದಾಯಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುವುದು ಸಂತಸ ತಂದಿದೆ ಎಂದರು.

ತಾಲೂಕು ಅಧ್ಯಕ್ಷ ಅಕ್ಕಿ ಶಿವಕುಮಾರ್ ಮಾತನಾಡಿ, ಸಾಮೂಹಿಕ ವಿವಾಹದಲ್ಲಿ ಮದುವೆಯಾಗುವುದು ಪುಣ್ಯವಂತರು, ಅನೇಕ ಗುರುಹಿರಿಯರ ಆಶೀರ್ವಾದ ದೊರೆಯುತ್ತದೆ. ತಾವು ಸಮಾಜದಲ್ಲಿ ಹಿರಿಯರಿಗೆ ಗೌರವ ನೀಡುತ್ತ ಸುಸಂಸ್ಕೃತರಾಗಿ ಪಾಲಕರನ್ನು ಉತ್ತಮವಾಗಿ ನೋಡಿಕೊಂಡು ಜೀವನ ನಡೆಸಿ ಎಂದು ಕರೆ ನೀಡಿದರು.

ಇದೇ ವೇದಿಕೆಯಲ್ಲಿ 4 ಜೋಡಿಗಳಿಗೆ ಹೊಸಬಾಳಿಗೆ ಪಾದರ್ಪಣೆ ಮಾಡಿದರು. ಸಮಾರಂಭವನ್ನು ಸಮಾಜ ಸೇವಕಿ ವಾಣಿ ನೇಮಿರಾಜ್‌ನಾಯ್ಕ್ ಉದ್ಘಾಟಿಸಿದರು. ಸಮುದಾಯದ ರಾಜ್ಯ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ, ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಮಂಗಳ ಬಸವರಾಜ್, ತಾಲೂಕು ಅಧ್ಯಕ್ಷೆ ನಿರ್ಮಲ ಮೆಣಸಿಗಿ, ಪ್ರಧಾನ ಕಾರ್ಯದರ್ಶಿ ರುದ್ರಮ್ಮ ಕೊಟ್ರೇಶ, ಯುವ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಿಚಿಡಿ ಕೊಟ್ರೇಶ್, ಜಿಲ್ಲಾ ಕಾರ್ಯದರ್ಶಿ ಪೋಟೋ ವೀರೇಶ, ತಾಲೂಕು ಅಧ್ಯಕ್ಷ ಎಸ್.ಎ.ಸಂತೋಷ್, ಜೆಡಿಎಸ್ ಮಂಡಲ ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಮುಖಂಡರಾದ ಮಂಜುನಾಥ ಗೌಡ, ವೀರಭದ್ರಗೌಡ, ವೀರನಗೌಡ ಮೆಣಸಿಗಿ, ಗೌರಜ್ಜನವರ ಗಿರೀಶ್, ನವೀನ್ ಎಲೆಗಾರ್, ಕೊಟ್ರೇಶ್ ಕೊಬ್ಬಜ್ಜಿ, ಆನೇಕಲ್ ಕೊಟ್ರೇಶ, ಎಚ್.ಎ.ಪರಿಕ್ಷಿತ್, ಮೋರಗೆರೆ ಮಂಜುನಾಥ, ಮನೋಹರ್, ಕಡಲಬಾಳು ನಾಗರಾಜ್, ಕೊಟ್ರೇಶ್ ತುಪ್ಪದ್ ಮತ್ತಿತರರಿದ್ದರು.

ತಾಲೂಕು ಕಾರ್ಯದರ್ಶಿ ರವೀಂದ್ರ ಬಾವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಬಸವರಾಜ್ ಸೊನ್ನದ್, ಶಿವಶಂಕರಗೌಡ, ಸಂಚಿ ಶಿವಕುಮಾರ್ ನಿರ್ವಹಿಸಿದರು.

ಸಂತೋಷ್ ಲಾಡ್ ಜನ್ಮದಿನ: ಕಲಿಕಾ ಸಾಮಾಗ್ರಿ ವಿತರಣೆ, ಜಾನಪದ ಕಲಾವಿದರಿಗೆ ಸನ್ಮಾನ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಪ್ರಗತಿಪರ ಮತ್ತು ಅಭಿವೃದ್ಧಿ ಚಿಂತನೆಗಳನ್ನು ಮೈಗೂಡಿಸಿಕೊಂಡಿರುವ ಸಚಿವ ಸಂತೋಷ್ ಲಾಡ್ ಅವರಿಂದ ರಾಜ್ಯದ ಅಭಿವೃದ್ಧಿಗೆ ಉತ್ತಮ ಕೊಡುಗೆ ನಿರೀಕ್ಷಿಸಬಹುದಾಗಿದೆ ಎಂದು ಕಾಂಗ್ರೆಸ್ ಯುವ ಮುಖಂಡ ರೋಗಾಣಿ ಪ್ರಕಾಶ್ ಅಭಿಪ್ರಾಯಪಟ್ಟರು.

ತಾಲೂಕಿನ ನಾರಾಯಣದೇವರ ಕೆರೆ ಗ್ರಾಮದಲ್ಲಿ ಕಾರ್ಮಿಕ ಖಾತೆ ಸಚಿವ ಸಂತೋಷ್ ಲಾಡ್ ಜನ್ಮದಿನಾಚರಣೆ ನಿಮಿತ್ತ ವಿದ್ಯಾರ್ಥಿಗಳಿಗೆ ಉಚಿತ ಕಲಿಕಾ ಸಾಮಗ್ರಿ ವಿತರಿಸಿ ಮಂಗಳವಾರ ಮಾತನಾಡಿದರು. ತಾಲೂಕಿನ ಮಾಲವಿ ಜಲಾಶಯಕ್ಕೆ ಶಾಶ್ವತ ನೀರು ಕಲ್ಪಿಸುವ 150 ಕೋಟಿ ರೂ.ಯೋಜನೆ ಜಾರಿಗೊಳಿಸುವಲ್ಲಿ ಈ ಹಿಂದಿನ ಶಾಸಕ ಎಸ್.ಭೀಮನಾಯ್ಕ ಅವರಿಗೆ ಸಂತೋಷ್ ಲಾಡ್ ಒತ್ತಾಸೆಯಾಗಿ ನಿಂತಿದ್ದರು. ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ ಲಾಡ್ ಯುವಜನರಿಗೆ ಪ್ರೇರಕಶಕ್ತಿಯಾಗಿದ್ದಾರೆ. ಕಾರ್ಮಿಕ ಖಾತೆ ಸಚಿವರಾಗಿ ಈ ನಾಡಿನ ಕಾರ್ಮಿಕರ ಕಲ್ಯಾಣಕ್ಕೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಹಲವು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುವ, ದೇಶ ವಿದೇಶದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ವಿಶ್ಲೇಷಿಸಬಲ್ಲ ಸಂತೋಷ್ ಲಾಡ್ ನಾಡಿನ ಚುಕ್ಕಾಣಿ ಹಿಡಿಯುವ ನಾಯಕತ್ವದ ಗುಣ ಹೊಂದಿದ್ದಾರೆ ಎಂದರು. ಇದೇವೇಳೆ ಶಾಲೆಯ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಾಗ್ರಿ ವಿತರಿಸಿದರು. ಇದಕ್ಕೂ ಮುನ್ನ ಸಂತೋಷ್ ಲಾಡ್ ಜನ್ಮದಿನದ ನಿಮಿತ್ತ ಜಾನಪದ ಕಲಾವಿದರನ್ನು ಸನ್ಮಾನಿಸಿದರು. ಮುಖಂಡರಾದ ಉಳ್ಳಾಗಡ್ಡಿ ಮಾರುತಿ, ಕೆ.ಮೌಲಾಹುಸೇನ್, ಬಂಗಾರಿ ನಾಗರಾಜ, ಹುಳ್ಳಿ ರವಿ ಇತರರಿದ್ದರು.

ಮಾ. 1 ರಿಂದ 22 ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ

■ ಹಂಪಿ ಟೈಮ್ಸ್ ಕೊಟ್ಟೂರು

ಮಾರ್ಚ್ – 1 ರಿಂದ 22 ರ ವರೆಗೆ ನಡೆಯುವ ವಿವಿಧ ವಿಷಯಗಳ ದ್ವಿತೀಯ ಪಿಯುಸಿ ಪರೀಕ್ಷೆಗೆ, ಪಟ್ಟಣದ 2 ಪರೀಕ್ಷೆ ಕೇಂದ್ರಗಳಲ್ಲಿ,ಕೇಂದ್ರದ ನಿರೀಕ್ಷಕರು ಸಕಲ ಸಿದ್ಧಾಂತಗಳನ್ನು ಕೈಗೊಂಡಿದ್ದಾರೆ.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜ್ ನಲ್ಲಿ 950 ಹಾಗೂ ಕೊಟ್ಟೂರೇಶ್ವರ ಕಾಲೇಜ್ ನಲ್ಲಿ 1217 ಈ ಎರಡು ಪರೀಕ್ಷೆ ಕೇಂದ್ರಗಳಿಂದ ಸೇರಿ ಒಟ್ಟು 2167 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಸರ್ಕಾರಿ ಕಾಲೇಜ್ ಪರೀಕ್ಷಾ ಕೇಂದ್ರದಲ್ಲಿ ಕೊಟ್ಟೂರೇಶ್ವರ ಕಾಲೇಜ್, ಉಜ್ಜಿನಿ ಸದ್ಧರ್ಮ ಸಂ. ಪ.ಪೂ ಕಾಲೇಜ್,ಎಸ್.ಜಿ.ಟಿ ಕಾಲೇಜ್, ಭಾಗೀರಥಿ ಮರುಳಸಿದ್ಧನಗೌಡ ಕಾಲೇಜ್ ಜೊತೆಗೆ ಸರ್ಕಾರಿ ಕಾಲೇಜ್ ಸೇರಿ ಒಟ್ಟು 5 ಕಾಲೇಜ್, ಕೊಟ್ಟೂರೇಶ್ವರ ಪ.ಪೂ ಕಾಲೇಜ್ ಪರೀಕ್ಷಾ ಕೇಂದ್ರದಲ್ಲಿ ಇಂದು ಮತ್ತು ಇಂದು ಇನೋವೇಟಿವ್ ಕಾಲೇಜ್ ಹಾಗೂ ಸನ್ನಿಧಿ ಕಾಲೇಜ್ ನ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವರು.

ಸರ್ಕಾರಿ ಕಾಲೇಜ್ ಕೇಂದ್ರದಲ್ಲಿ 32 ಕೊಠಡಿಗಳು ಹಾಗೂ ಕೊಟ್ಟೂರೇಶ್ವರ ಕಾಲೇಜಿನಲ್ಲಿ 39 ಕೊಠಡಿಗಳಲ್ಲಿ ಸಿಸಿ ಕ್ಯಾಮರ್, ಸ್ವಚ್ಛತೆ ಸೇರಿದಂತೆ ಹಾಸನ ವ್ಯವಸ್ಥೆಯನ್ನು ಕೂಡಾ ಕಲ್ಪಿಸಿ ವಿದ್ಯಾರ್ಥಿಗಳು ಸುಸೂತ್ರವಾಗಿ ಪರೀಕ್ಷೆ ಬರೆಯಲು ಕೇಂದ್ರಗಳನ್ನು ತಯಾರಿಮಾಡಿದ್ದಾರೆ.

ಪರೀಕ್ಷೆ ಕೇಂದ್ರದ ಮಾರ್ಗ ಸೂಚಕರಾಗಿ ತಹಶಿಲ್ದಾರ ಅಮರೇಶ್ ಜಿ.ಕೆ ಹಾಗೂ ಪರಿವೀಕ್ಷಣಾ ಅಧಿಕಾರಿಯಾಗಿ ಎಪಿಎಂಸಿ ಕಾರ್ಯದರ್ಶಿ ವೀರಣ್ಣ ,ಪರೀಕ್ಷಾ ಕೇಂದ್ರದ ನಿರೀಕ್ಷಕರಾಗಿ ಕಾಲೇಜಿನ ಪ್ರಾಚಾರ್ಯರು ಜಿ.ಸೋಮಶೇಖರ್ ಹಾಗೂ ಪ್ರಶಾಂತ ಕುಮಾರ್ ಕಾರ್ಯ ನಿರ್ವಹಿಸಲಿದ್ದಾರೆ.

ಪರೀಕ್ಷೆ ಕೇಂದ್ರದ ಭದ್ರತೆಗೆ ಪೋಲಿಸ್ ಸಿಬ್ಬಂದಿ ನೇಮಕ, ಆರೋಗ್ಯ ತಪಾಸಣೆಗೆ ಶ್ರೂಶ್ರುಶ್ಯಕರ ಆಯೋಜನೆ, ಸುವ್ಯವಸ್ಥಿತ ಶೌಚಾಲಯ ಸೌಲಭ್ಯ, ಕುಡಿಯುವ ನೀರಿನ ಸೌಲಭ್ಯ ಸೇರಿದಂತೆ ಸಕಲ ಸಿದ್ಧತೆಗಳನ್ನು ಕೈಗೊಂಡಿರುವರು.

> ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಎಲ್ಲಾ ಕಾಲೇಜಿನ,ವಿಜ್ಞಾನ, ಕಲಾ,ಶಿಕ್ಷಣ,ವಾಣಿಜ್ಯ ವಿಷಯಗಳ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸಿಸಿದ ವಿಷಯಗಳನ್ನು ಪರೀಕ್ಷೆಯಲ್ಲಿ ನಿರ್ಭಯವಾಗಿ ಪರೀಕ್ಷೆ ಬರೆದು ಉತ್ತಮ ಅಂಕಗಳನ್ನು ಗಳಿಸುವ ಮೂಲಕ ಕಾಲೇಜಿನ ಹಾಗೂ ಪೋಷಕರ ಕೀರ್ತಿ ಹೆಚ್ಚಿಸಲಿ,ವಿದ್ಯಾರ್ಥಿಗಳಿಗೆ ಶುಭ ಹಾರೈಕೆ.
> ಕೆ.ನೇಮಿರಾಜ್ ನಾಯ್ಕ್, ಶಾಸಕರು ಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರ.

ಜೆ.ಜೆ.ನಗರದ ಶ್ರೀ ದುರ್ಗಾಂಭಿಕೆ ದೇವಿ ಜಾತ್ರಾಮಹೋತ್ಸವ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಪಟ್ಟಣದ ಜೆ.ಜೆ.ನಗರದಲ್ಲಿ ಕಳೆದೆರಡು ದಿನಗಳಿಂದ ಶ್ರೀದುರ್ಗಾಂಭಿಕಾ ದೇವಿ ಜಾತ್ರಾಮಹೋತ್ಸವ ಆರಂಭವಾಗಿದೆ. ಶ್ರೀದೇವಿಯ ಮೂರ್ತಿ ಮೆರವಣಿಗೆ ಪಟ್ಟಣದಲ್ಲಿ ಬುಧವಾರ ವಿವಿಧ ವಾಧ್ಯಗಳಿಂದ ಸಾಗಿ, ದೇಗುಲಕ್ಕೆ ಬಂದು ತಲುಪಿತು. ಗುರುವಾರ ಶ್ರೀದೇವಿ ಗುಡಿತುಂಬುವ ಮೂಲಕ ಹಬ್ಬ ಆಚರಿಸಲಾಗುತ್ತಿದೆ.

ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ, ದೇಗುಲದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು ಎಂದು ದೇಗುಲದ ಅರ್ಚಕ, ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಹನುಮಂತಪ್ಪ ತಿಳಿಸಿದರು. ಕಾರ್ಯಕ್ರಮ ಯಶಸ್ವಿಗೆ ದೇಗುಲದ ಭಕ್ತ ಸಮೂಹ ಮತ್ತು ಯುವಕರು ಕಾರ್ಯಕ್ರಮದಲ್ಲಿ ತೊಡಗಿಕೊಂಡಿರುವುದು ಪ್ರಮುಖವಾಗಿದೆ ಎಂದರು.

ಪಾಕ್ ಪರ ಜೈಕಾರ ಕೂಗಿದ ಆರೋಪಿ ಗಡಿಪಾರಿಗೆ ಆಗ್ರಹಿಸಿ ಪ್ರತಿಭಟನೆ

ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ, ನಗರಘಟಕ ಅಧ್ಯಕ್ಷ ರೇವಣಸಿದ್ದಪ್ಪ ಆಗ್ರಹ

■ ಹಂಪಿ ಟೈಮ್ಸ್ ಹೊಸಪೇಟೆ

ಪ್ರಜಾಪ್ರಭುತ್ವದ ದೇಗುಲವಾಗಿರುವ ವಿಧಾನಸೌಧದೊಳಗೆ ರಾಜ್ಯ ಸದಸ್ಯ ನಾಸೀರ್ ಹುಸೇನ್ ಬೆಂಬಲಿಗರು ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದ್ದರೂ ಅದನ್ನು ವಿರೋಧಿಸುವುದರ ಬದಲಾಗಿ ಮಾಧ್ಯಮಗಳ ಮೇಲೆಯ ಹರಿಹಾಯ್ದಿರುವುದು ಅವರ ಸಂಸ್ಕೃತಿಯನ್ನು ಬಿಂಬಿಸುತ್ತದೆ. ದೇಶದ್ರೋಹದ ಘೋಷಣೆ ಕೂಗಿದ ದೇಶದ್ರೋಹಿಯನ್ನು ಬಂಧಿಸಿ ಗಡಿಪಾರು ಮಾಡಬೇಕೆಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ ಆಗ್ರಹಿಸಿದರು.

ನಗರದ ಕಾಲೇಜ್‌ರಸ್ತೆಯ ಕಾಂಗ್ರೆಸ್ ಕಚೇರಿ ಎದುರು ಬುಧವಾರ ಪ್ರತಿಭಟನೆಯಲ್ಲಿ ಮಾತನಾಡಿದರು. ದೇಶದ್ರೋಹಿಗಳನ್ನು ಜೊತೆಗಿಟ್ಟುಕೊಂಡು ಬೆಳೆಯಬೇಕೆಂದು ಕನಸು ಕಂಡಿದ್ದರೆ ಮುಂದಿನ ದಿನಗಳಲ್ಲಿ ಜನ ತಕ್ಕ ಪಾಠ ಕಲಿಸಲಿದ್ದಾರೆ. ಕೂಡಲೇ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕು. ಡಿಸಿಎಂ ಮತ್ತು ಸಿಎಂ ಕೂಡಲೇ ದೇಶದ್ರೋಹಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು. ದೇಶದಲ್ಲಿ ಹಿಂದೂಒಮುಸ್ಲಿಂರು ಐಕ್ಯತೆಯ ಭಾವನೆಯಿಂದ ಬದುಕುತ್ತಿರುವವ ಮಧ್ಯೆ ದುಷ್ಟರನ್ನು ಪತ್ತೆ ಹಚ್ಚಿ ಕೂಡಲೇ ಕ್ರಮಕೈಗೊಳ್ಳಬೇಕು ಎಂದರು. ನಗರಘಟಕದ ಅಧ್ಯಕ್ಷ ಎನ್.ಎಸ್.ರೇವಣಸಿದ್ದಪ್ಪ ಮಾತನಾಡಿ, ಭಾರತದ ಭೂಮಿಯಲ್ಲೇ ಹುಟ್ಟಿ ಅನ್ನ ನೀರು ಶಿಕ್ಷಣ ಪಡೆದು ಬೆಳೆದವರು ಪಾಕಿಸ್ತಾನ್ ಜಿಂದಾಬಾದ್ ಎಂದೇಳುವ ಮೂಲಕ ದುಷ್ಟರ ದೇಶಪ್ರೇಮ ಬಯಲಾಗಿದೆ. ಭಾರತೀಯ ಮನಸಿಗೆ ತೀವ್ರ ನೋವಾಗಿದೆ. ದೇಶದ್ರೋಹಿಯನ್ನು ದೇಶದಿಂದ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು. ಬಿಜೆಪಿ ಮುಖಂಡರಾದ ಮಧುರಚೆನ್ನಶಾಸ್ತ್ರಿ, ಚೌಡಪ್ಪ, ಅನುರಾಧ ಸೇರಿದಂತೆ ಬಿಜೆಪಿ ವಿವಿಧ ಘಟಕ, ಮೋರ್ಚಾಗಳು ಕಾರ್ಯಕರ್ತರು, ಪದಾಧಿಕಾರಿಗಳು ಇದ್ದರು.

ವಿಜ್ಞಾನದಿಂದ ಜೀವನ ಸುಗಮ

■ ಹಂಪಿ ಟೈಮ್ಸ್ ಬಳ್ಳಾರಿ

ಅಸಾಧ್ಯವಾದುದೆಲ್ಲವನ್ನು ಇಂದು ಸಾಧ್ಯವಾಗಿಸಿದ್ದು ವಿಜ್ಞಾನ. ವಿಜ್ಞಾನದ ಸಹಾಯದಿಂದ ಜೀವನ ಅತ್ಯದ್ಭುತವೆನಿಸುತ್ತಿದೆ ಎಂದು ವೀರಶೈವ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಡಾ.ಸಿ.ನಾಗಭೂಷಣ ಅವರು ಹೇಳಿದರು.

ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಬೆಂಗಳೂರು ಮತ್ತು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ನಗರದ ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿರ ಪ್ರೌಢಶ